ಮದಪ್ಪೆರಾವಂದಿ ತುಳುವೆರ್ ಮಾಲಿಕೆ - ೩೧

ಸಿಂಗಾರಕವಿ ಹಂಸರಾಜೆ

# ರತ್ನಾಕರ ವರ್ಣೆ



ಕರ್ನಾಟಕ
ತುಳು ಸಾಹಿತ್ಯ
ಅಕಾಡೆಮಿ

ಮುನಿರಾಜ ರೆಂಜಾಳ

ಮದಪ್ಪೆರಾವಂದಿ ತುಳುವೆರ್ ಮಾಲಿಕೆ - ೩೧

ಸಿಂಗಾರಕವಿ ಹಂಸರಾಜೆ

# ರತ್ನಾಕರ ವರ್ಣೆ

ಮುನಿರಾಜ ರೆಂಜಾಳ

**ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ**
ಮಹಾನಗರಪಾಲಿಕೆ ಕಟ್ಟಡ, ಲಾಲ್‌ಬಾಗ್, ಮಂಗಳೂರು - 575 003

**SINGARAKAVI HAMSARAJE RATNAKARA VARNI**
Life Sketch of great poet Ratnakara Varni, writer of 'Bharatheshavaibhava' and his other literary works by Sri Muniraja Renjala, teacher, Jain High School, Moodubidre - 574 227


Author
**Muniraja Renjala**

Chief Editor
**Dr. Palthady Ramakrishna Achar**
President
Karnataka Tulu Sahitya Academy

Publisher
**Chandrahasa Rai B.**
Registrar
Karnataka Tulu Sahitya Academy

First Edition : 2011



© : Karnataka Tulu Sahitya Academy



Pages : 40

Price : ₹ 33

Cover Design : **Kalloor Nagesh**

Designed & Printed at :
**Aakrithi Prints**
K.S. Rao Road, Mangalore – 575 001
Tel. : 0824 2443002

# ಗುರ್ಕಾರ್ರೆನ ಮದಿಪು

ತುಳುವೆರ್ ಪಿರಾಕ್‌ಡ್ದಿಂಚಿ ನಡತೊಂದು ಬತ್ತಿನ ಆರಾಧನೆ, ಆಚರಣೆ, ನಂಬೊಳಿಗೆಲೆನ್ ಮಾತ ಒರಿತೊಂದು ಬತ್ತಿನಕುಲು. ಅಂಚಾದೇ ತುಳುನಾಡ್ ಪುಣ್ಯೊದ ನಾಡ್‌ಂದ್ ಪುದರ್ ಪಡೆತ್‌ಂಡ್. ಕರಿದ್ ಪೋಯಿನ ಎಡ್ಡೆ ವಿಸಯೊಲೆನ್ ಒರಿತೊಂದು ಪೋಪಿನವು ಎಡ್ಡೆ ಸಂಸ್ಕೃತಿ. ಸಂಸ್ಕೃತಿ ವೈಜ್ಞಾನಿಕತೆದ ಸುತ್ತುಗಟ್ಟ್‌ಡ್ ಉಪ್ಪೊಡು. ಸಾಮಾಜಿಕ ಪ್ರಜ್ಞೆ ಬೊಕ್ಕ ಧಾರ್ಮಿಕ ನಿಲೆಗಟ್ಟ್ ಆಯಿಕ್ ಬೋಡು. ಅಂಚಿನ ಸಂಸ್ಕೃತಿಯೇ ದುಂಬೊತ್ತೊಂದು ಪೋಪುಂಡು. ಬಾಸೆ, ಸಾಹಿತ್ಯೊ, ಕಲೆ, ಪರಪೋಕು, ಸೇವೆ – ಉಂದು ಮಾತ ಸಂಸ್ಕೃತಿದ ಬಾಗೊಲು. ನೆನ್ನ್ ಒರಿತ್‌ದ್ ಬುಳೆಪಯರೆಗಾದ್ ಬೆಂದಿನ ತುಳುವೆರ್ ಏತೋಜನ. ತುಳುವೆರ್ ಪಂಡ ಬಜೀ ತುಳು ಅಪ್ಪೆ ಬಾಸೆದಕುಲು ಮಾತ್ರ ಅತ್ತ್, ತುಳುನಾಡ್‌ಡ್ ಜಲ್ಮೊಗು ಬತ್ತಿನಕುಲು, ತುಳು ಬಾಸೆ ತೆರಿನಕುಲು, ತುಳುತ ಬಗೆಟ್ ಉಡಲ್ ದಿಂಜಿ ಹೆಗ್ಗಳಿಕೆ ದೀವೊನ್ನಕುಲು ಮಾತ ತುಳುವೆರ್.

ಒಪ್ಪಾಂಡಲಾ ಒಂಜಿ ಮರ್ಗಿಲ್‌ಡ್ ತುಳುಬಾಸೆ ಸಂಸ್ಕೃತಿ, ತುಳು ಸಂಪೊತ್ತುದ ಬುಳೆಚಿಲ್‌ಗಾದ್ ಅಕುಲೆ ಸೇವೆ ಸಂದ್‌ದಿತ್ತ್‌ಂಡ ಅಂಚಿನ ಪುಣ್ಯಾತ್ಮೆರೆನ ಬದ್ಕ್, ಸಾಧನೆಲೆನ್ ನೆಂಪುಡು ಒರಿತೊನುನವು ನಮ್ಮ ಧರ್ಮೊ. ಈ ನಿಲೆಟ್ ಕರಿದ್ ಪೋಯಿನಕುಲೆನ ಪುದರ್‌ಡ್ ಅಕಾಡೆಮಿ ಬೂಕುಲೆನ್ ಬರೆಪಾದ್ ಮದಪ್ಪೆರಾವಂದಿ ತುಳುವೆರ್ ಪನ್ಪಿ ಗ್ರಂತ ಮಾಲೆಡ್ ಬೊಳ್ಪುಗು ಕನವೊಂದುಂಡು.

ಭರತೇಶವೈಭವ ಪನ್ಪಿನ ಮಹಾಕಾವ್ಯೊನು ಬರೆಯಿನ ರತ್ನಾಕರವರ್ಣಿ, ತುಳುನಾಡ್‌ದ ಮೂಡಬಿದ್ರೆಡ್ ಪುಟ್ಟಿನ, ತುಳು ಮಹಾಕವಿ. ಕವಿ ತುಳುಟ್ ಬರೆಯಿನ ಬೇತೆ ಗ್ರಂಥೊಲು ತಿಕ್ಕ್‌ದ್‌ಜ. ಆಂಡಲಾ ಆಯೆ ತುಳುತ ಅಭಿಮಾನಿ ಪಂಡ್‌ದ್ ಭರತೇಶ ವೈಭವೊಡು ಆಯೆ ಸುರುಟ್ ಬರೆತಿನ ಪದ್ಯ 'ಅಯ್ಯಯ್ಯ ಎಂಚ ಪೊರ್ಲಾಂಡ್‌ಂದ್ ತುಳುವರು ಮೈಯುಬ್ಬಿ ಕೇಳಬೇಕಣ್ಣಾ' ಪನ್ಪಿನ ಸಾಲ್‌ನ್ ಓದ್‌ನಗ ಗೊತ್ತಾಪುಂಡು. ರತ್ನಾಕರವರ್ಣಿ ಭರತೇಶ ವೈಭವ ಮಾತ್ರ ಅತ್ತ್ ತ್ರಿಲೋಕಶತಕ, ಅಪರಾಜಿತೇಶ್ವರ ಶತಕ, ರತ್ನಾಕರಾಧೀಶ್ವರ ಶತಕ ಇಂಚಿನ ಗ್ರಂಥೊಲೆನ್ ಬರೆತೆ. ಸೋಮೇಶ್ವರ ಶತಕ ಬೊಕ್ಕ ಬಸವಪುರಾಣ ಗ್ರಂಥೊನ್‌ಲಾ ಆಯೆನೆ ಬರೆತಿನೆ ಪಂಡ್‌ದ್ ಕೆಲವೆರೆನ ಅಭಿಪ್ರಾಯೊ. ಆಂಡ ನೆಕ್ಕ್ ದಿಂಜ ಆಧಾರ ತಿಕ್ಕ್‌ಜಿ.

ರತ್ನಾಕರವರ್ಣಿನ ಬದ್‌ಕ್‌ದ ಕತೆನ್ ತೆರಿಯೊಂದು ಪೋಂಡ ಅವೊಂಜಿ ಏರ್ತೆ ಜಪ್ಪೆಲ್ದ ಮಲ್ಲ ಕಡಲ್. ಜೈನಕುಲೊತ್ತ ಸಾಮಾನ್ಯ ಬೇರೊದ ಸೆಟ್ಟಿ ದೇವರಾಜಯ್ಯನ ಮಗೆ ರತ್ನಾಕರವರ್ಣಿ. ಕವಿಯಾದ್ ಕಾರ್ಲದ ಬೈರವರಸುನ ಓಲೆಗೊಗ್ ಸೇರ್ಯೆ. ಆಯೆ ಕವಿ ಮಾತ್ರ ಅತ್ತ್ ಯೋಗ ವಿದ್ಯೆ, ಮಾಯಾವಿದ್ಯೆಲೆಡ್ ಸಾಧನೆ ಮಲ್ತಿ ಒರಿ ಅವಧೂತೆ. ಬೈರವರಸುನ ಮಗಲ್ ಕಲಾವಿದೆ. ರತ್ನಾಕರಗ್‌ಲಾ ರಾಜಕುಮಾರಿಗ್‌ಲಾ ಇನೆಮೋಕೆ ಪುಟ್ಟುಂಡ್. ಮಾಯಾವಿದ್ಯೆಡ್ ಆಯೆ ರಾಜಕುಮಾರಿನೊಟ್ಟುಗೆ ಸೇರ್ಯೆ ಉಂದು ಗೊತ್ತಾಯಿನ ಬೈರವರಸು ಆಯನ್ ಬಂಧನೊಡು ದೀಪೆ. ಅವಧೂತೆ ಆಯಿನ ರತ್ನಾಕರೆ ಬಂಧನೊಡ್ದ್ ತಪ್ಪೊಂದ್ ಪಿರ ಮೂಡಬಿದ್ರೆಗೇ ಬರ್ಪೆ. ಮೂಡಬಿದ್ರೆಡ್ ಆಯನ ನಿರೆಕರೆತ ಇಲ್ಲ್‌ಲ್ ಒಂಜಿ ವೀರಶೈವ ಕುಟುಂಮೊ ಇತ್ತ್‌ಂಡ್. ಆ ಕುಟುಮೊಡ್ತಿ ರತ್ನಾಕರವರ್ಣಿನ ಸಮಾನ ಪ್ರಾಯೊದ ಪೊಣ್ಣು ಗಿರಿಜಾ ರತ್ನಾಕರವರ್ಣಿಗ್ ಬಂಧನ ಆಂಡ್‌ಂದ್ ಪನ್ಪಿ ಸುದ್ದಿ ಕೇಂಡ್‌ದ್ ಬಾಳೆಹೊನ್ನೂರುದ ವೀರಶೈವ ಮಠೊಕ್ ಪೋದು ದೀಕ್ಷೆ ಪಡೆದ್ ಸನ್ಯಾಸಿನಿ ಆತಲ್ ಪನ್ಪಿ ಸುದ್ದಿ ಆಯಗ್ ತೆರಿದ್ ಬರ್ಪುಂಡು.

ಭರತೇಶ ವೈಭವ ಮಲ್ಲ ಕಾವ್ಯ ಆಂಡಲಾ ಅಯಿಟ್ ಕವಿ ಯೋಗ, ಭೋಗ ಸಮನ್ವಯ ಮಲ್ತ್‌ದ್ ಧರ್ಮೊಡ್ದಚ್ಚ ಬೋಗನ್ ವರ್ಣನೆ ಮಲ್ತ್‌ದೆ ಪನ್ಪಿ ಕಾರಣಡ್ದಾವರ ಜೈನ ಮಠಾಧೀಶೆರೇರ್ಲಾ ಆ ಕಾವ್ಯೊಗ್ ಮಾನಾದಿಗೆ ಕೊರ್ಪುಜೆರ್. ಇಂಚ ಬೇಜಾರ್‌ಡ್ ಆಯೆ ಬಾಳೆಹೊನ್ನೂರುಗು ಪೋದು ಲಿಂಗ ಧಾರಣೆ ಮಲ್ತ್‌ದ್ ವೀರಶೈವ ಧರ್ಮೊಗು ಸೇರ್ಯೆ. ಅಲ್ಪ ದುಂಬೇ ಪೋದಿತ್ತಿನ ಆಯನ ನೆರೆಕರೆತ್ತ ಪೊಣ್ಣು ಗಿರಿಜೆಡ ಪಾತೆರ್ಯೆ, ಸನ್ಯಾಸಿನಿ ಆದಿತ್ತಿನ ಗಿರಿಜೆ ಪಿರ ಗೃಹಸ್ಥ ಧರ್ಮೊಗ್ ಬರಿಯೆರೆ ಒಪ್ಪುಜಲ್. ಈ ಸಂಗತಿನ್ ಎನ್ನೊಂದ್ ಆಯೆ ಬರೆತಿನ

''ಕರ್ಮವೇ ಬಲ್ಲಿತಲ್ಲ, ಜಿನಧರ್ಮವ
ನುಳಿದೆನ್ನ ನೀಪರಿ ಹುಚ್ಚು ಮಾಡಿತಲ್ಲ,
ಕರ್ಮವಶದಿ ಕಾರ್ಗತ್ತಲೆ ಕವಿದೆನ್ನ

ಚರ್ಮಕೆ ಲಿಂಗವು ಬಿತ್ತಲ್ಲ, ನಿರ್ಮಲ ಶ್ರೀ
ಜಿನಧರ್ಮದೊಳಿದ್ದೆನ್ನ ಈ ಮೈ ಹುಚ್ಚು ಮಾಡಿತಲ್ಲ''

ಪನ್ಪಿ ಪಾತೆರೊಡು ಆಯೆ ಒರ ವೀರಶೈವ ಧರ್ಮೊಗ್ ಸೇರ್ದ್ ಪಿರ ಆಯಿನ್ ಬುಡ್ದು ಜೈನಧರ್ಮೊಗ್ ಬತ್ತ್‌ದೆ ಪನ್ಪಿ ವಿಚಾರ ತೆರಿದ್ ಬರ್ಪುಂಡು. ವೀರಶೈವ ಧರ್ಮೊಡುಪ್ಪುನಗನೇ ಆಯೆ ಸೋಮೇಶ್ವರ ಶತಕಲಾ, ಬಸವ ಪುರಾಣಲಾ ಬರೆದಿಪ್ಪೆರೆ ಸಾಧ್ಯತೆ ಉಂಡು.

ಬಾಳೆಹೊನ್ನೂರುಡ್ದ್ ಆಯೆ ಶ್ರವಣಬೆಳಗೊಳಗ್ ಪೋಪೆ. ಶ್ರವಣಬೆಳಗೊಳಡ್ ಅಣುವ್ರತ ಕೈಕೊಂದು ಸನ್ಯಾಸಿ ಆದ್ ಪಿರ ಮೂಡಬಿದ್ರೆಗ್ ಬತ್ತ್‌ದ್ ದರ್ಮೊಗು ಸಮ್ಮಂದ ಪಟ್ಟಿನ ಶತಕೊಲೆನ್ ಬರೆಪೆ. ದಿಂಜ ಕೀರ್ತನೆಲೆನ್ ಬರೆಪೆ. ಆಯೆ ಬರೆಯಿನ ಕೀರ್ತನೆಲು ಇತ್ತೆಲಾ ಮೂಡಬಿದ್ರೆಡ್ ಮಾತ್ರ ಅತ್ತ್, ಜೈನೆರ್ ಓಲೋಲು ಉಲ್ಲೆರಾ ಅಕುಲೆಗ್ ಪೂರ ಆರಾಧನೆದ ಪದೊಕುಲಾದುಂಡು ಪನ್ಪಿ ವಿಚಾರೊನು ರತ್ನಾಕರನ ಬಗೆಟ್ ಸಂಶೋಧನೆ ಮಲ್ತಿನ ವಿದ್ವಾಂಸೆರ್‌ನಕುಲು ಅಭಿಪ್ರಾಯ ಕೊರ್ತೆರ್.

ಜೈನ ಸನ್ಯಾಸಿಲು ಭರತೇಶ ವೈಭವೊಗ್ ಆ ಕಾಲೊಡು ಮಲ್ಲ ಮಾನ್ಯತೆ ಕೊರ್‌ಜೆರ್‌ಂದಾಂಡಲಾ ಸಾಹಿತ್ಯ ದೃಷ್ಟಿಡ್ ಅವೊಂಜಿ ಮಹಾಕಾವ್ಯ. ಜೈನಧರ್ಮೊಡ್ ಬಾಹುಬಲಿ, ಭರತೆ ಮಗ್ಗಿ-ಪಲೆ. ತ್ಯಾಗ, ಅಹಿಂಸೆ, ಯೋಗ ದಾನೊಗು ಬಿಲೆ ಕೊರ್ನ ಬಾಹುಬಲಿ ಜೈನೆರೆನ್ ಒರಿ ತೀರ್ಥಂಕರೆ ಆಯೆ. ಆಂಡ ಕವಿ ಬಾಹುಬಲಿನ್ ಬುಡ್ದ್ ಭರತೇಶನ್ ಪುಗರ್ದ್ ಯೋಗ - ಭೋಗ ಉಂದ್ ರಡ್ಡ್‌ಲಾ ಬದ್‌ಕ್‌ಡ್ ಸಮಾನವಾದಿಪ್ಪೊಡು ಪಂಡ್‌ದ್ ತೋಜಾದ್ ಕೊರ್ತಿನ ವಿಶೇಷ. ಈ ಕಾವ್ಯ ದೇಸೀ ಪದ್ಧತಿದ ಸಾಂಗತ್ಯ ರೂಪೊಡುಂಡು.

''ಜ್ಞಾನಾನವನಾತ್ಮಗರ್ಪಿಸುತಿಹ ನನ್ನ ಪಾನವ ಮೈಗೀವುತಿಹನು
ಜ್ಞಾನಿಗಳಲ್ಲದೆ ಭರತೇಶನೆದೆಯ ಸಂಧಾನವ ಬಲ್ಲವರಾರು''

ಪಂಡ್‌ದ್ ಕವಿ ಭರತೇಶನ್ ಯೋಗ - ಭೋಗ ಸಮನ್ವಯವಾದ್ ಮಲ್ತೊಂದಿತ್ತಿ ಬಲಿಷ್ಠ ಅರಸುಂದ್ ವರ್ಣನೆ ಮಲ್ತ್‌ದೆ.

ಈ ಕಾವ್ಯೊಡ್ ತುಳುನಾಡ್‌ದ ಪರಿಸರದ ವಿವರಣೆ ಉಂಡು. ಕಡಲ್‌ದ ವರ್ಣನೆ ಉಂಡು. ಜೋಕುಲೆನ ಗೊಬ್ಬುದ ಬಗ್ಗೆ ಬರೆತೆ. ತುಳುನಾಡ್‌ದ ತಿಂಡಿ ತೆನಸ್‌ದ ಬಗ್ಗೆ ಬರೆತೆ. ತುಳು ಸಂಸ್ಕೃತಿನ್ ನೆಗತ್ ತೋಜಾದೆ. ತುಳುವೆರ್ ಈ ಕಾವ್ಯೊನು ಓದುದು ಬೆಕ್ಕಸ ಆವೊಡ್‌ಂದ್ ಪನ್ತೆ. ಅಯಿನೊಟ್ಟಿಗೆನೆ ಆಯೆ 'ರಯ್ಯ ಮಂಚಿದಿ ಎನೆ ತೆಲುಗಾ' ತೆಲುಗುದಕ್‌ಲ್‌ಲಾ ಈ ಕಾವ್ಯೊನು ಓದ್‌ದ್ ಸಂತೋಸ್ ಪಡೆವೊಡ್‌ಂದ್ ಪನ್ತೆ. ತುಳುಕ್‌ಲಾ ತೆಲುಗುಗುಲಾ ದಾಲ ಸಮ್ಮಂದ ಇತ್ತಿಲೆಕ ತೋಜುಜಿ. ಆಯೆ ತೆಲುಗೆರ್‌ನ ವಿಚಾರೊನ್ ದಾಯೆ ಬರೆತೆಂದ್ ಅಂದಾಜಿ ಆಪುಜಿ. ಭವಿಷ್ಯ ಆಯೆ ಆಯನ ಕಾವ್ಯೊಗ್ ತುಳುನಾಡ್‌ಡ್ ಪುಗರ್ತೆ ತಿಕ್ಕುಜಿಂದ್ ಪನ್ನಗ ವಿಜಯನಗರೊದ ಅರುಸುಲೆನ ಆಸ್ಥಾನೊಗ್ ಪೋದಿಪ್ಪೊಡು. ಅತ್ತಂಡ ಬಾರ್ಕೂರುಡ್ ಆಳೊಂದಿತ್ತಿನ ವಿಜಯನಗರದ ರಾಜಪ್ರತಿನಿಧಿನ್

ತೂದಿಪ್ಪೊಡು. ವಿಜಯನಗರೊಡ್ ತೆಲುಗು ಮೆರೆವೊಂದಿತ್ತ್ಂಡ್. ಅಲ್ಪ ಆಯಗ್ ಆಸ್ಥಾನ ಕವಿಯಾವೊಡು ಪನ್ಪಿನ ಆಸೆ ಇತ್ತಿನೆಡ್ಡಾವರ ಆಯೆ ಈ ವಾಕ್ಯೊನು ಬರೆದಿಪ್ಪೊಡು. ಆಂಡ ಅವು ಸಾಧ್ಯ ಆಯಿಜಿ. ಆಯೆ ವಿಜಯನಗರೊಗ್ ಪೋದಿತ್ತಿನ ಪೊರ್ತುಗ್ ಅವು ವಿಜಯನಗರದ ಅವಸಾನೊದ ಪೊರ್ತಾದಿಪ್ಪೊಡು.

ದಾನೆನೆ ಆವಡ್ ರತ್ನಾಕರವರ್ಣಿ ಮಲ್ಲ ಕವಿ. ಸಿಂಗಾರ ಕವಿ ಹಂಸರಾಜೆ. ಅಯಿತೊಟ್ಟಿಗೆನೆ ಮಲ್ಲ ಯೋಗಿಲಾ ಆದಿತ್ತೆ ಪನ್ಪಿನೆಕ್ ದಾಲ ಸಂಶಯ ಇಜ್ಜಿ. ಈ 'ಭರತೇಶ ವೈಭವ' ಇಂಗ್ಲಿಷ್, ಹಿಂದಿ, ಗುಜರಾತಿ, ಮರಾಠಿ ಇಂಚ ಬೇರೆ ಬೇತೆ ಭಾಷೆಲೆಗ್ ತರ್ಜುಮೆ ಆದ್ ಲೋಕ ಸಾಹಿತ್ಯದ ಸಾಲ್‌ಗ್ ಸೇರ್ದ್ಂಡ್ಂದ್ ಪನ್ಪಿನವು ನಂಕ್ ಮಲ್ಲ ಸಂತೋಷದ ವಿಚಾರ.

ರತ್ನಾಕರವರ್ಣಿನ ಬಗೆಟ್ ತುಳುಟ್ ಬತ್ತಿನ ಒಂಜಿ ಸುರುತ ಬೂಕು ಪಂಡ್‌ದ್ ಪನ್ಪಿನ ಅಕಾಡೆಮಿಗೊಂಜಿ ಪುಗರ್ತೆ. ನೆನ್ನ್ ಬರೆದ್ ಕೊರ್ನ ಮೂಡಬಿದ್ರೆದ ಮುನಿರಾಜ ರೆಂಜಾಳ ಮೇರ್ ತುಳುಭಾಷೆದ ಮಿತ್ತ್ ಅಭಿಮಾನ ಇತ್ತಿನಾರ್. ತುಳು – ಕನ್ನಡೊದ ಮಲ್ಲ ವಾಗ್ಮಿ. ಸಾಹಿತ್ಯದ ಮಲ್ಲ ಮಲ್ಲ ಲೇಸ್‌ಲೆನ್ ಪೊರ್ಲುಗು ಪೊಲಿಗೆಡ್ ಸುಧಾರಿಕೆ ಮನ್ಪುನ ಸಾಮರ್ತ್ಯವಂತೆ. ಮೂಡಬಿದ್ರೆದ ಜೈನ ಪ್ರೌಢಶಾಲೆಡ್ ಕನ್ನಡ ಗುರುಕುಲಾದ್ ಬೇಲೆ ಬೆಂದೊಂದುಪ್ಪುನ ಮೇರ್ ಕನ್ನಡೊಡು ಕೆಲವು ಬೂಕುಲೆನ್ ಬರೆತೆರ್. ತುಳುಟು ಉಂದು ಆರೆನ ಸುರುತ ಬೂಕು. ಸುರುತ ಬೂಕುಡೇ ಆರ್ ತುಳು ಬಾಸೆದ ಮಿತ್ತ್ ಆರೆಗಿತ್ತಿನ ಹಿಡಿತೊನು ತೋಜಾದ್ ಕೊರ್ತೆರ್. ಆರೆನ ಸೋದನೆದ ಪ್ರವೃತ್ತಿನ್ ತೆರಿಪದೆರ್. ಇತ್ತಿನೆನ್ ಇತ್ತಿಲೆಕ, ಕೇಂಡಿನೆನ್ ಕೇಂಡಿಲೆಕ ಪ್ರಾಮಾಣಿಕತೆ ದೀದ್ ಬರೆತೆರ್. ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿದ ಸದಸ್ಯೆರಾದಿತ್ತ್‌ದ್ ಆರ್ ತುಳುತ ಬಗ್ಗೆ ಬೂಕು ಬರೆಪಿನೆತ ಬಗ್ಗೆ, ಎಚ್ಚ ವಿಚಾರೊಲೆನ್ ತೆರಿಯೊಂದೆರ್. ಕೇಂಡಿ ಸಾತ್‌ಗ್ ಬೂಕ್ ಬರೆದ್ ಕೊರ್ತಿನ ಆರೆಗ್ ಅಕಾಡೆಮಿದ ಪುದರ್‌ಡ್ ಸೊಲ್ಮೆ ಸಂದಾವೊಂದುಲ್ಲೆ. ಅಂಚನೆ ಬೂಕುನು ಬೊಲ್ಪುಗು ಕನತಿನ ಅಕಾಡೆಮಿದ ರಿಜಿಸ್ಟ್ರಾರ್ ಶ್ರೀ ಬಿ. ಚಂದ್ರಹಾಸ ರೈ ಬೊಕ್ಕ ಸರ್ವ ಸದಸ್ಯೆರೆಗ್‌ಲಾ, ಬೂಕುನು ಪೊರ್ಲುಗು ಪೊಲಿಗೆಡ್ ಅಚ್ಚಿ ಮಲ್ತ್ ಕೊರ್ನ ಆಕೃತಿ ಪ್ರಿಂಟ್ಸ್‌ದ ಶ್ರೀ ಕಲ್ಲೂರು ನಾಗೇಶ್ ಬೊಕ್ಕ ಕೂಟೊದಕುಲೆಗ್‌ಲಾ ಸೊಲ್ಮೆಲು.

ಕುಡ್ಲ
೨೦೧೧ ಬೇಸ್ಯ ೧೭

**ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್**

## ಎನ್ನ ರಡ್ಡ್ ಪಾತೆರೊ

ತುಳು ಎಂಕ್ಲ್ ಎಲ್ಲಿಡ್ದಿಂಚ ಇಲ್ಲಡ್ ಪಾತೆರುನ ಎನ್ನ 'ಅಪ್ಪೆ ಬಾಸೆ'. ಆಂಡ ಬರೆಪ್ಪುನ ವಿಸಯೊಗು ಬತ್ತ್ಂಡ, ಯಾನ್ ತುಳುಟ್ಟು ಈತ್ ಪೊರ್ತುಗು ದಾಲಾ ಬರೆತ್ತ್ಜಿ. ಇತ್ತೆ ಬರೆವೊಂದಿಪ್ಪುನ ಈ ''ಮಹಾಕವಿ ರತ್ನಾಕರ ವರ್ಣಿ'' ಪುಸ್ತಕನೇ ಎನ್ನ ತುಳುತ್ತ ಸುರುತ್ತ ಪುಸ್ತಕೊ. ಎನ್ನ ಭಾಗ್ಯೊಡ್ದಾತ್ರ ಯಾನ್ 1998ಡ್ದು 2001 ಮುಟ್ಟ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿದ ಸದಸ್ಯೆ ಆದಿತ್ತೆ. ಆ ಪೊರ್ತುಗು ಪೊಳಲಿ ಬಾಲಕೃಷ್ಣ ಶೆಟ್ರೆನ ಗುರ್ಕಾರ್ಮೆಡ್ ಎಂಕ್ಲ್ ಅಕಾಡೆಮಿದ ಬೇಲೆ ಮಲ್ಪುನಗ ಎನಡ ನನಲಾತ್ ತುಳುತ್ತ ಮೋಕೆ ದಿಂಜಿಂಡ್. ಅಡೆಮುಟ್ಟ ಸಭೆಕ್ಲೆಡ್ ಕನ್ನಡೊಡು ಪಾತೆರೊಂದಿತ್ತ್ನ ಯಾನ್ ಐಡ್ದ್‌ಬೊಕ್ಕ ತುಳುಟ್ಟು ಪಾತೆರೆರ ಸುರುಮಲ್ತೆ. ಎಂಕ್ಲೆನ ಕಾರ್ಲಡ್ ತುಳು ಅಕಾಡೆಮಿದ ವರ್ಸೊದ ಪ್ರಶಸ್ತಿ ಕೊರ್ಪಿನ ಲೇಸ್ ಮಲ್ತೊ. ಅಪಗ ನನಲಾತ್ ತುಳುತ್ತ ಮಿತ್ತ್‌ದ ಅಭಿಮಾನ ಎಚ್ಚಾಂಡ್. ಅಂಚೆನೆ ನನಲಾತ್ ತುಳುಕಾತ್ರ ಬೇಲೆ ಮಲ್ಪೊಡು ಪನ್ಪಿನ ಆಸೆ ಪುಟ್ಟುಂಡ್.

ಯಾನ್ ಸಾಲೆಡ್ ಪಾಟ ಮಲ್ತುನು ಕನ್ನಡೊಡು. ಅಂಚಾದ್ ಕನ್ನಡದ ಮಿತ್ತ್‌ಲಾ ಎಂಕ್ ದಿಂಜ ಮೋಕೆ ಉಂಡು. ಕನ್ನಡೊಡು ಕೆಲವು ಪುಸ್ತಕೊಲೆನ್ನ್ಲಾ ಬರೆತ್ತೆ. ಆಂಡ ತುಳುಟ್ಟು ದಾಲಾ ಬರೆತ್ತ್ಜಿ. ಇತ್ತೆ ಕನ್ನಡ ಪ್ರೀತಿ ತುಳುಕ್ಕಾವಡ್, ಅತ್ತಂಡ ತುಳುತ್ತ ಮೋಕೆ ಕನ್ನಡಗಾವಡ್ ದಾಲಾ ತೊಂದ್ರೆ ಕೊರ್ಪುಜೀಂದ್ ಗೊತ್ತಾತ್ತ್ಂಡ್. ಅಂಚಾದ್ ತುಳುಟ್ಲಾ ನನಲಾತ್ ಬರೆವೊಡು ಪನ್ಪಿ ಆಸೆ ಇತ್ತೆ ಪುಟ್ಟುದುಂಡು.

ಯಾನ್ ಕರಿನ ಇರ್ವ ವರ್ಸೊ ಪಿರಾವು ಬೇಲೆಗಾತ್ರ ಬೆದ್ರಗ್ ಪೋಯಿ ಬೊಕ್ಕ, ಆ ಬೆದ್ರದ ಮಣ್ಣ್‌ಡ್ ಪುಟುದುನ ಮಾಮಲ್ಲ ಬಿರ್ಸೆ ರತ್ನಾಕರ ವರ್ಣಿನ ಬಗ್ಗೆ ತೆರಿಯೆ. ದಿನ ಪೋಯಿಲೆಕ್ಕನೇ ಆಯನ ಬಗೆಟ್ ಪೊಸ ಪೊಸ ವಿಸಯೊಲೆನ್ ತೆರಿಯೊಂಡೆ. ಅಂಚ ನನಲಾತ್ ತೆರಿಯೊಡ್ ಪನ್ಪಿ ಮೋಕೆಡ್ ದುಂಬು ಪೋಯೆ. ಮಸ್ತ್ ವಿಸಯೊಲೆನ್ ಅಲ್ಪ-ಮುಲ್ಪ ಕನ್ನಡೊಡು ಬರೆವರ, ಪಾತೆರ್ಯೆರೆ ಸುರುಮಲ್ತೆ. ಬೆದ್ರದ ''ಮಹಾಕವಿ

ರತ್ನಾಕರ ವರ್ಣಿ'' ವೇದಿಕೆದಕ್ಲ್ ನಡಪ್ಪಾವೊಂದಿತ್ತ್‌ನ ರಾಜ್ಯ ಮಟ್ಟೊದ ಪ್ರಬಂಧ ಸ್ಪರ್ಧೆಲೆಡ್ ಏಪೊಲಾ ಭಾಗವಹಿಸಾದ್, ರತ್ನಾಕರನ ವಿಷಯೊಡೇ ಬೇತೆ ಬೇತೆ ಸಂಗತಿಲೆನ್ ಬರೆದ್, ಐನ್ ಸರ್ತಿ 'ಬಹುಮಾನ' ಪಡೆಯೆ. ಉಂದು ಪೂರ ಆಯನ ಬಗ್ಗೆ ಎಂಕ್ ನನಲಾತ್ ತೆರಿಯೊಂದೇ ಪೋವೊಡು ಪನ್ಪಿ ಆರ್ತಿನ್ ಪುಟ್ಟಾಂಡ್.

ಇಂಚಪ್ಪ ಐಸಾಜಿ ವರ್ಸೊಡ್ದಿಂಚಿ ರತ್ನಾಕರ ವರ್ಣಿನ 'ಭರತೇಶ ವೈಭವೊ' ಬೊಕ್ಕ ಶತಕೊಲೆನಂ ಅಲ್ಪಲ್ಪ 'ವಾಚನ-ಪ್ರವಚನ' ಮಲ್ಪುನ ಬೇಲೆ ಸುರುಮಲ್ತೆ. ಕುಡ್ಲ, ಕಾರ್ಲ, ಬೆದ್ರ... ಇಂಚ ಕೈತಲ್ದ ಊರುಲೆಡ್ ಅತ್ತಾಂದೆ ಉತ್ತರ ಕರ್ನಾಟಕೊದ ಕೆಲವು ಊರುಲೆಡ್ಲಾ ಭರತೇಶ ವೈಭವೊನು ದೀವೊಂದ್ ವಾರಗಟ್ಲೆ 'ಪ್ರವಚನ' ಮಲ್ತೆ. ಇಂಚ ಮಾತ ಆದ್ ಎಂಕಿತ್ತೆ ರತ್ನಾಕರೆ ಪಂಡ ಮಸ್ತ್ ಮೋಕೆ, ಗೌರವ. ಉಂದುವೇ ಪೊರ್ತುಡು ತುಳು ಅಕಾಡೆಮಿದ ಗುರ್ಕಾರೆ ಪಾಲ್ತಾಡಿ ರಾಮಕೃಷ್ಣ ಆಚಾರ್ ಈ ಪುಸ್ತಕ ಬರೆವೊಡು ಪಂಡಿನವು ಎನ್ನ ಭಾಗ್ಯೊ. ನೆಡ್ದ್ ಎಂಕ್ ಮಸ್ತ್ ಕುಸಿ ಆಂಡ್. ಆಂಡ ತುಳುಟ್ಟು ಸುರು ಬರೆವೊಂದಿಪ್ಪುನೈಡ್ದಾತ್ರ ಒಂತೆ ನಿಧಾನ ಆಂಡ್. ಇತ್ತೆ ಮುಗಿತ್ತ್ ಕೊರೊಂದುಲ್ಲೆ.

ಯಾನ್ ಇತೊರ್ತು ತುಳುಟ್ಟು ಬರೆತ್ತಿಜಿ. ಆಯಿನಾಡ್ದಾತ್ರ, ನೆಟ್ಟ್ ಮಸ್ತ್ ಬಾಸೆದ ದೋಸೊಲು ಇಪ್ಪುಂದು ಎನ್ನುವೆ. ಅವೆನ್ ಮಾತ ತುಳು ಬಂಧುಲು ಮಾಪು ಮಲ್ತ್‌ದ್, ಎಂಕ್ ನನಲಾತ್ ಬರೆವರ ಉಮೇದ್ ಕೊರೊಡುಂದ್ ಕೇಂಡೊನ್ಪೆ. ಎಂಕ್ ನೆನ್ನ್ ಬರೆವರ ಬೆರಿ ತಟ್ಟ್‌ದ್ ಅವಕಾಶ ಕೊರಿನ ಪಾಲ್ತಾಡಿದಾರೆಗ್ಲಾ, ರಿಜಿಸ್ಟ್ರಾರ್ ಬಿ. ಚಂದ್ರಹಾಸ ರೈ, ಅಂಚನೆ ಅಕಾಡೆಮಿದ ಮಾತೆರೆಗ್ಲಾ ಯಾನ್ ಮೋಕೆಡ್ ಸೊಲ್ಮೆ ಸಂದಾವೆ. ನೆನ್ನ್ ಓದುನ ತುಳು ಬಂಧುಲೆಗ್ಲಾ ಎನ್ನ ಸೊಲ್ಮೆಲುಂಡು. ಮಾತೆರೆಡ್ದ್ ಹೆಚ್ಚಿಗೆ ದಿನೊಡ್ದ್ ದಿನೊಕ್ಕು ಎನನ್ 'ಆಕರ್ಷಣೆ' ಮಲ್ತೊಂದಿಪ್ಪುನ, ಎಂಕ್‌ಲಾ ಎಡ್ಡೆ ಪುದರ್ ಕನತ್ತ್ ಕೊರಿನ ಆ ಮಾಮಲ್ಲ ಕವಿ ರತ್ನಾಕರ ವರ್ಣಿಗ್ ಎನ್ನ ಉಡಲ್ ದಿಂಜಿನ ಸಾರೊ ಸಾರೊ ಸುಗಿಪು ಸಂದಾವೆ.

**ಮುನಿರಾಜ ರೆಂಜಾಳ**
ಅಧ್ಯಾಪಕರು
ಜೈನ ಪ್ರೌಢಶಾಲೆ, ಮೂಡುಬಿದಿರೆ, ದ.ಕ.

ಸಿಂಗಾರಕವಿ ಹಂಸರಾಜೆ

# ರತ್ನಾಕರ ವರ್ಣಿ

ಪರಶುರಾಮನ ಸೃಷ್ಟಿಂದ್ ಪುದರ್ ಪಡೆಯಿನ ನಮನ ಪೊರ್ಲುದ ತುಳುನಾಡ್, ತುಳುವಪ್ಪೆನ ಬಂಗಾರ್ ಜೋಕ್ಲೆಗ್ ಜನ್ಮ ಕೊರಿನ ಪುಣ್ಯಭೂಮಿ. ಉಂದು ದುಂಬುಡ್ದಿಂಚಲಾ ಬುದ್ಧ್ಯಂತೆರೆಗ್, ಸಾಹಸಿಲೆಗ್, ಎಡ್ಡೆ ಬೆನ್ಪಿನ ಬಿರ್ಸೆರೆಗ್, ಸತ್ಯ-ಧರ್ಮೊಡು ನಡಪ್ಪುನ ಎಡ್ಡೆ ನರಮಾನ್ಯೆರೆಗ್, ಪ್ರಾಮಾಣಿಕೆರಾಯಿನ ಜನೊಕುಲೆಗ್ ನಿಲೆ ಕೊರ್ದು ದೆರ್ತ್ ಪತ್ತಿನ ಮಣ್ಣ್. ಪಡ್ಡಾಯಿ ಗಟ್ಟೊದ ಮುದೆಲ್‌ಡ್ದ್ ಕಡಲ ಬರಿ ಮುಟ್ಟ ಪರಡ್‌ದಿಪ್ಪುನ ಈ ತುಳುವೆರೆ ತೊಟ್ಟಿಲ್‌ಡ್ ಪುಟ್ಟುದು ಬಲತ್ತಿನ ಏತೋ ಜನ, ಊರು-ಪರಊರುಡು ತನ್ಕುಲೆ ಬಿರ್ಸಾದಿಗೆಡ್ ಎಡ್ಡೆ ಬೇಲೆ ಮಲ್ತ್‌ದ್ ಮಲ್ಲ ಪುದರ್ ಪಡೆತ್ತೆರ್. ಅಂಚಿತ್ತಿ ಜನೊಕ್ಲೆಡ್ದಾತ್ರ ನಮನ ಈ ತುಳುನಾಡ್‌ಗ್‌ಲಾ ಎಡ್ಡೆ ಮಾನಾದಿಗೆ ತಿಕ್ಕ್ಂಡ್. ತುಳುನಾಡ್‌ದ ಜನೊಕ್ಕುಲು ಬಾರೀ ಬಿರ್ಸೆರ್ ಪನ್ಪಿನ ಕೀರ್ತಿ ತಿಕ್ಕ್ಂಡ್. ನಮನ ತುಳುವಪ್ಪೆನ ಮಟ್ಟೆಲ್ಡ್ ಪುಟ್ಟುದ ಬಲತ್ತ್‌ದ್ ಬಿರ್ಸಾದಿಗೆದ ಎಡ್ಡೆ ಬೇಲೆ ಮಲ್ತ್‌ದ್ ಎಡ್ಡೆ ಪುದರ್ ಕೊಣತ್ತ್‌ನಂಚಿತ್ತಿ ಮಹಾಪುರುಷೆರೆನ್ ನಮ ಏಪಲಾ ಮದಪ್ಪರಾವಂದ್. ಅಕ್ಲ್ ಮಲ್ತಿ ಬೇಲೆ, ಕೊಣತ್ತಿನ ಪುದರ್ ನನದ ಜೋಕ್ಲೆಗ್ ಸ್ಫೂರ್ತಿಯಾವೊಡು.

ಇನಿ ನಮನ ತುಳುನಾಡ್‌ನ್ ನೆಂಪು ದೀವೊಂದು ಸಾಹಿತ್ಯ ಕ್ಷೇತ್ರೊನು ನೆನೆತ್ತ್ಂಡ ಕೂಡ್ಲೆ ನಂಕ್ ತೋಜಿದ್ ಬರ್ಪುನಾಯೆ 'ಮಹಾಕವಿ ರತ್ನಾಕರವರ್ಣಿ'. ಆಯೇ ಬಜೀ ತುಳುನಾಡ್‌ದ ಕವಿ ಅತ್ತ್; ಇಡೀ ಪ್ರಪಂಚೊಡೇ ಕನ್ನಡ ಸಾಹಿತ್ಯ ಕ್ಷೇತ್ರೊಡು ಆಯೆ ಪುಗರ್ತೆ ಪಡೆಯಿನ ಕವಿ. ಆಯನ 'ಭರತೇಶ ವೈಭವ' ಪನ್ಪಿ ಮಾಮಲ್ಲ ಕೃತಿಟ್ಟ್ ''ಅಯ್ಯಯ್ಯ ಎಂಚ ಪೊರ್ಲಾಂಡೆಂದ್ ತುಳುವರು ಮೈಯುಬ್ಬಿ ಕೇಳಬೇಕಣ್ಣಾ'' ಪಂಡ್‌ದ್, ಸುರುಟ್ಟೆ ನೆನೆತ್ತೊನ್ನ ಪಾತೆರ ಆಯಗ್ ತುಳುತ

ಮಿತ್ತಿತ್ತಿ ಅಭಿಮಾನೊನು ತೋಜವುಂಡು. ತುಳತ್ತ ಮಲ್ಲ ಅಭಿಮಾನಿ ಆಯಿನ ಆಯೆ ತುಳುನಾಡ್‌ದ ಪೆರ್ಮೆದ ಕವಿ. ಈ ಭೂಮಿ ಬುಡ್ದ್ ಆಯೆ ಪೋದು ನಾಲ್‌ನೂದ್ ವರ್ಸ ಕರಿಂಡಲಾ ಜನೊಕ್ಕುಲು ಇನಿಕ್ಕ್‌ಲಾ ಆಯನ್ ಏಪಲಾ ಎನ್ನೊನುವೆರ್. ಆಯನ ಬರವುಲೆನ್ ಮಾತೆರ್ಲಾ ಮೋಕೆಡ್ ಓದುದು ಕುಸಿಪಡೆವೊಂದೇ ಉಲ್ಲೆರ್. ಇಂಚ ಎಡ್ಡೆ ಬರವುದ ಮೂಲಕ ಏಪೊಲಾ ಮಾತೆರೆಗ್ಲಾ ಸಂತೋಸು ಕೊರುನಂಚಿತ್ತಿ ಮಹಾಕವಿ ರತ್ನಾಕರನ್ ಏಪೊಗ್ಲಾ ಮದಪ್ಪರ ಸಾಧ್ಯ ಇಜ್ಜಿ

ರತ್ನಾಕರೆ ಪುಟುದು ಬಲತ್ತಿ ನೂರು, ನಮನ ತುಳು ಸೀಮೆದ ನಡುಟ್ಟಿಪ್ಪುನ ಬೆದ್ರ. ದುಂಬು ಈ ಊರುಡು ಮಸ್ತ್ ಬೆದ್ರ್ ಬುಳೆವೊಂದಿತ್ತ್‌ಂಡ್‌ಗೆ. ಅಂಚ ಇಡೆಗ್ ಬೆದ್ರಾಂದ್ ಪನ್ಪೆರ್. ಉಂದು ಸತ್ಯೊನೆ. ದಾಯೆ ಪಂಡ ಇತ್ತೆ ಕಾಡ್ ಪೋದ್ ಊರು ಆತ್‌ಂಡಲಾ ಮುಲ್ಪ ಮಸ್ತ್ ಕಡೆಟ್ಟ್ ಅಲ್ಪ-ಮುಲ್ಪ ಬೆದ್ರ್‌ದ ಪುಂಡೆಲ್ ತೋಜಿದ್ ಬರ್ಪುಂಡು. ಇಂಚಿನ ಬೆದ್ರಗ್ ಕನ್ನಡೊಡು ಅವ್ವೇ ಅರ್ಥೊಡು 'ಬಿದಿರೆ' ಪಂಡ್‌ದ್ ಪುದರಿತ್ತ್‌ಂಡ್. ಐಡ್ದ್ ಬೊಕ್ಕ ಅಂಚಿ ಕಡಲ ಬರಿಟ್ಟ್ ನನೊಂಜಿ 'ಬಿದಿರೆ' ಪನ್ಪಿ ಊರು ಉಂಡುಂದು ತೆರಿದ್ ಬತ್ತ್‌ಂಡ್‌ಗೆ. ಅಪಗ ಪಡ್ಡಾಯಿದ ಅರಸುಲ್ಲಕುಲು ಬೆದ್ರನ್ 'ಮೂಡುಬಿದಿರೆ'ಂದ್, ಅವೆನ್ ಪಡುಬಿದಿರೆಂದ್ ಲೆತ್ತೆರ್ಗೆ. ರತ್ನಾಕರನ ಊರು ಮೂಡುಬಿದಿರೆ. ನೆಕ್ಕ್ ಮಸ್ತ್ ಪಿರಾಕ್‌ಡ್ "ಕ್ಷೇಮ ವೇಣುಪುರ" ಪಂಡ್‌ದ್ ಪುದರಿತ್ತ್‌ಂಡ್ ಮುಲ್ಪದ ಶಾಸನೊಲೆಡ್ದ್ ತೆರಿದ್ ಬರ್ಪುಂಡು.

ಒಂಜಿ ಕಾಲೊಡು ಪದಿನೆಣ್ಮ ಕೆರೆ, ಪದಿನೆಣ್ಮ ದೇವಸ್ಥಾನ, ಪದಿನೆಣ್ಮ ಜೈನ ಬಸದಿಲೆಡ್ದ್ ಮೆರೆವೊಂದಿತ್ತ್‌ನ ಈ ಬೆದ್ರಗ್ 'ಜೈನಕಾಶಿ'ಂದ್‌ಲಾ ಪುದರ್ ಉಂಡು. ಒಂಜಿ ಐನೂದ್ದು ವರ್ಸೊ ಪಿರಾವುಡು ಮುಲ್ಪ ಮಸ್ತ್ ಜೈನೆರ್ ಇತ್ತೆರ್. ಅಪಗ ಮುಲ್ಪದ ಜೈನೆರ್ನ ಪೇಟೆಡೇ 700 ಜೈನೆರ್ನ ಇಲ್ಲುಲು ಇತ್ತ್‌ಂಡ್‌ದ್ ತೆರಿದ್ ಬರ್ಪುಂಡು. ಇಂಚ ಮಸ್ತ್ ಇತ್ತಿನ ಜೈನೆರ್, ಅಂಚೆನೆ ಪೊರ್ಲುದ ಪದಿನೆಣ್ಮ ಬಸದಿಲು ಮಲ್ಲಾದಿಗೆ, ಮಾನಾದಿಗೆಡಿತ್ತಿನ ಈ ಊರುನು 'ಜೈನಕಾಶಿ' ಮಲ್ತ್‌ಂಡ್. ಇಂಚಿತ್ತಿ 'ಜೈನಕಾಶಿ' ಬೆದ್ರದ ಜೈನ ಪೇಟೆದ ಜೈನೆರೆ ಇಲ್ಲಡ್ ಪುಟ್ಟಿನ ಪುಣ್ಯ ಪುರುಷನೇ 'ಮಹಾಕವಿ ರತ್ನಾಕರವರ್ಣಿ'.

ರತ್ನಾಕರನ ಬದ್‌ಕ್‌ದ ಬಗ್ಗೆ ತೆರಿಯೊಡುಂದು ನಮ ಪಿದಾಡ್‌ಂಡ, ನಂಕ್ ಹೆಚ್ಚಿಗೆ ವಾ ವಿಷಯೊಲಾ ತೆರಿದ್ ಬರ್ಪುಜಿ ಪನ್ಪಿನವು ಬಾರೀ ಬೇಜಾರ್‌ದ ಸಂಗತಿ. ದಾಯೆ ಇಂಚಾಂಡ್ ಪಂಡ, ಮಲ್ಲ ಮಲ್ಲ ಸಾಹಿತ್ಯೊದ ಗ್ರಂಥೊಲೆನ್ ಬರೆಯಿನ ರತ್ನಾಕರ ವರ್ಣಿ ದುಂಬುದ ಕಾಲದ ಮಸ್ತ್ ಕವಿಕ್ಕುಲು ಮಲ್ತಿಲೆಕ್ಕ ಒಲ್ಪಲಾ ಆಯನ ಬಗ್ಗೆ ಆಯೆನೇ ದಾಲಾ ಬರೆವೊಂದಿಜೆ. ಆತೆ ಅತ್ತಾಂದೆ ಆಯನ ಬಗ್ಗೆ ಆಯನ ಕಾಲೊದ ಬೇತೆರ್ಲಾ ಒಲ್ಪಲಾ ದಾಲಾ ಬರೆದಿಜೆರ್. ಆಯನ ಬಗ್ಗೆ ಆ ಕಾಲೊದ ವಾ ಶಾಸನದಂಚಿನ ಆಧಾರೊಲ್ಲಾ ತಿಕ್ಕುಜಿ. ಆಯನ ಬಗ್ಗೆ ಆಯೆನೇ ದಾಲಾ ಪಂಡೊನಂದೆ ಇಪ್ಪುನವು ಆಯನ ಮಲ್ಲ ಗುಣೊ, ನಿರಂಹಕಾರತ್ವಂದ್ ಪನೊಲಿ. ಆಂಡ ಐಡ್ದ್ ಇತ್ತೆದ ನಮಕ್ ಮಾತ್ರ ಮಸ್ತ್ ಬಂಜ ಆಂಡ್.

ರತ್ನಾಕರನ ಬರವುದ ಇಡೆಕ್ಲೆಡ್ ಸರೀ ನಾಡ್ಂಡ ನಮಕ್ ತಿಕ್ಕುನ ವಿವರ ಈತೆ : 'ಆಯೆ ಪುಟ್ಟಿನ ಊರು ವೇಣುಪುರಂದ್ ಲೆತ್ತೊಂದಿತ್ತಿನ ಬೆದ್ರ. ಆಯನವು ಕ್ಷತ್ರಿಯ ವಂಶ. ದೇವೆರಾಯಿನ ಶ್ರೀ ಮಂಧರ ಸ್ವಾಮಿಯೇ ಆಯನ ಅಮ್ಮೆರ್. ದೀಕ್ಷೆ ಕೊರಿನ ಗುರುಕ್ಕುಲು ಚಾರುಕೀರ್ತಿ ಸ್ವಾಮಿಲು.' ಈತೆ ಅತ್ತಾಂದೆ ನನೊಂಜಿ ಕಡೆಟ್ಟ್ 'ಬಾರೀ ಬುದ್ಯಂತೆರಾಯಿನ ಜಗದ್ಗುರು ದೇವೇಂದ್ರ ಕೀರ್ತಿ ಸ್ವಾಮಿಲು ಎನ್ನ ಗುರುಕ್ಕುಲು, ಮೋಕ್ಷೊಗು ಗುರು ಹಂಸನಾಥೆಂದ್' ಪಂತೆ. ಈತ್ ಬುಡುಂಡ ಆಯನ ಬಗ್ಗೆ ಆಯೆ ಬರೆಯಿನ ವಾ ವಿಷಯೊಲಾ ನಮಕ್ ತಿಕ್ಕುಜಿ.

ಇಂಚಿನ ಪೊರ್ತುಡು ನಮ ಬೇತೆ ಎಂಚಾಂಡ್ಲ ರತ್ನಾಕರನ ಬಗ್ಗೆ ತೆರಿಯೊಡುಂದು ಪಿದಾಡ್ಂಡ, ಜನಕ್ಕುಲು ಬಾಯಿಡ್ ಪನೊಂದು ಬತ್ತ್‌ದ್‌ನ ಕೆಲವು ಕಟ್ಟ್‌ಕತೆಕ್ಕುಲು; ರತ್ನಾಕರಡ್ದ್ ಮುನ್ನೂದ್ದು ವರ್ಸೊಡ್ದ್ ಬೊಕ್ಕ ಬತ್ತಿನ ದೇವಚಂದ್ರೆ ಪನ್ಪಿನ ಕವಿ ಬರೆಯಿನ 'ರಾಜಾವಳೀ ಕಥೆ' ಪುಸ್ತಕೊಡು ಬರೆತ್ತಿನ ಕೆಲವು ವಿಷಯೊಲು; ಅಂಚನೆ ಬೇತೆ ಬೇತೆ ಕಡೆಡ್ದ್ ವಿಷಯ ಸಂಗ್ರಹ ಮಲ್ತ್‌ದ್ 1957ಟ್ ರಾಮೋ ವಿಶ್ವಾಮಿತ್ರೆರ್ ಬರೆಯಿನ 'ರತ್ನಾಕರಸಿದ್ಧಿ' ಕಾದಂಬರಿ, ಬೊಕ್ಕ 1961ಟ್ ಎಂ.ವಿ. ಶ್ರೀನಿವಾಸ್ ಬೊಕ್ಕ ಜಿ. ಬ್ರಹ್ಮಪ್ಪೆರ್ ಸೇರ್ದ್ ಬರೆತ್ತಿನ 'ರತ್ನಾಕರ' ಕಾದಂಬರಿ-ಉಂದೆನ್ ಮಾತ ಓದುಂಡ ನಮಕ್ ಒಂತೆ ವಿಷಯೊ ತಿಕ್ಕುಂಡು. ಆಂಡ ತಿಕ್ಕಿನ ವಿಷಯೊಲು ಪೂರಾ ಸತ್ಯೊನಾ ಸುಳ್ಳಾಂದ್ ಯೋಚನೆ ಮಲ್ತ್‌ದ್ ದೆತೊನೊಡಾಯಿನ ಸಂಗತಿಲು ಉಂಡು. ದಾಯೆ ಪಂಡ ಕೆಲವು ವಿಷಯೊಲು ಮಾತ ಒಂಜೊಜ್ಜೈಟ್ ಒಂಜೊಂಜಿ ರೀತಿಡ್ ಉಂಡು. ಈತಾನಗ ನಮಕ್ ಒಂಜಿ ಪ್ರಶ್ನೆ ಬರು. ಆತ್ ಕಷ್ಟೊಡು ನಮ ರತ್ನಾಕರನ ಜೀವನದ ವಿಷಯೊನು ದಾಯೆ ತೆರಿಯೊಡು? ಆಯೆ ಪನಂದಿ ಸಂಗತಿಲೆನ್ ನಮ ತೆರಿದ್ ದಾದ ಆವೊಡು?

ವಿಷಯ ಆಂದ್, ಆಂಡ ಯೇರೇ ಕವಿನ ಬರವುನು ಸರೀ ಅರ್ಥ ಮಲ್ತೊನೊಡುಂದಾಂಡ, ಆ ಬರವುದ ಪಿರಾಡ್ದ್ ಇಪ್ಪುನ ಕವಿನ ಬದ್‌ಕ್‌ನ್ಲಾ ನಮ ತೆರಿದಿತ್ತ್‌ಂಡ ಎಡ್ಡೆ. ಏಪೊಲಾ ಕವಿಕ್ಲೆನ ಬದ್‌ಕ್‌ಗ್ಲಾ ಬರವುಗ್ಲಾ ನಡುಟ್ಟು ಸಂಬಂಧ ಇಪ್ಪುಂಡು. ಅಂಚಾದ್ ನಮ ರತ್ನಾಕರ ವರ್ಣಿನ ಬದ್‌ಕ್‌ನ್ ಎಡ್ಡೆ ತೆರಿಂಡ, ಆಯನ ಪುಸ್ತಕೊಲೆನ ಬರವು-ಭಾವನೆಲೆನ್ ಎಡ್ಡೆಡ್ ಅರ್ಥ ಮಲ್ತೊನೊಲಿ. ಅಂಚಾದ್ ನಮ ಸುರುಟ್ಟು ಒಂತೆ ಆಯನ ಬದ್‌ಕ್‌ನ್ ತೆರಿಯೊನುಗ.

ಜನೊಕ್ಲೆನ ಬಾಯಿಡಿತ್ತಿನ ಕಥೆಕ್ಲೆನ್ ಬುಡುಂಡ, ರತ್ನಾಕರವರ್ಣಿನ ಬಗ್ಗೆ ನಮಕ್ ಮಸ್ತ್ ವಿಷಯೊ ತೆರಿಪಾದ್ ಕೊರಿನಾಯೆ ದೇವಚಂದ್ರೆ. ರತ್ನಾಕರೆ ಇತ್ತ್‌ನೆ ಪದಿನಾಜಿನೆ ಶತಮಾನೊಡು. ದೇವಚಂದ್ರೆ ಬದ್‌ಕ್‌ದಿತ್ತ್‌ನ್ ಕ್ರಿ.ಶ. 1770ಡ್ದ್ 1841 ಮುಟ್ಟ, ಪಂಡ ಪದಿನೆಣ್ಮ-ಪದಿನೊಂರ್ಬನೆ ಶತಮಾನೊಡು. ಇಂಚ ಮುನ್ನೂದ್ದು ವರ್ಸೊಡ್ದು ಬೊಕ್ಕ ಪುಟ್ಟಿನ ದೇವಚಂದ್ರೆ, ಆಯನ 'ರಾಜಾವಳೀ ಕಥೆ' ಪನ್ಪಿನ ಪುಸ್ತಕೊಡು ಇಂಚ ಪನೊಂದು ಪೋಪೆ:

''ತುಳುವ ದೇಶೊಡು ಬೆದ್ರದ ಊರುಡು ಸೂರ್ಯವಂಶೊದ ಅರಸು ಮನೆತನೊಟ್ಟು

ದೇವರಾಜೆ ಪನ್ಪಿನಾರೆಗ್ ಮಗೆ ಆದ್ ಪುಟ್ಟಿನಾಯೆ ರತ್ನಾಕರೆ. ಕಡಲ ದೇವೆರೆನ ಪುದರ್ ಪಡೆಯಿನ ಈ ರತ್ನಾಕರೆ ಎಲ್ಲಿಡೇ ಕಾವ್ಯ ಅಲಂಕಾರ ಲಕ್ಷಣ ಶಾಸ್ತ್ರೊಲೆಡ್ ಮಸ್ತ್ ಬಿರ್ಸಾದಿಗೆ ಪಡೆದಿತ್ತೆ. ಸಾರತ್ರಯ ಪನ್ಪಿ ಪುಸ್ತಕೊಗ್ ಕೇಶವವರ್ಯೆರ್ ಬರೆಯಿನ ವ್ಯಾಖ್ಯಾನೊಲೆನ್; ಕುಂದ ಕುಂದಾಚಾರ್ಯೆರ್ನ ಆಧ್ಯಾತ್ಮ ಸಿದ್ಧಾಂತೊಲೆಗ್ ಪ್ರಭೇಂದು ಬರೆಯಿನ ಟೀಕೆಲೆನ್, ಸಮಾಧಿಶತಕ ಏಕಸಪ್ತತಿ ಸ್ವರೂಪ-ಸಂಬೋಧನೆ ಇಂಚ ಮಸ್ತ್ ಆಗಮ ಗ್ರಂಥೊಲೆನ್ ಮಸ್ತ್ ಮನಸ್ ದೀದ್ ಓದುದ್ ತೆರಿದಿತ್ತಿನ ರತ್ನಾಕರೆ ಮಲ್ಲ ಕವಿ ಆಯೆ. ಆಯನ ಕಾವ್ಯ ಬರೆಪ್ಪುನ ಬಿರ್ಸಾದಿಗೆನ್ ಕೇಂಡ್ದ್ ತೆರಿನ ಆ ದೇಶೊದ (ಕಾರ್ಲದ) ಅರಸು ಚಂದ್ರವಂಶೊದ ಭೈರವ ಅರಸೆ ಇಂಬ್ಯನ್ ಲೆಪ್‌ಡಾದ್ ರಾಜಸಭೆಟ್ 'ಶೃಂಗಾರ ಕವಿ'ಂದ್ ಪುದರ್ ಕೊರ್ದ್ ಎಡ್ಡೆ ಮಾನಾದಿಗೆ ಮಲ್ತೆ. ಅಲ್ಪ ಪಂಡಿತೆರೆ ನಡುಟ್ಟು ಮಲ್ಲ ಪಂಡಿತೆ ಆದ್ ತೋಜಿದ್ ಬತ್ತ್‌ನ ರತ್ನಾಕರೆ ಎಡ್ಡೆ ಯೋಗ ಸಾಧನೆಲಾ ಮಲ್ತೆ. 'ಯೋಗ ರತ್ನಾಕರೆ'ಂದ್ ಪುದರ್ ಪಡೆಯಿನ ಆಯೆ ಜೋಕ್ಲಾಟಿಗೆದ ಆ ಪ್ರಾಯೊಡೇ ಭೈರವ ಅರಸೆರ್ನ ಮಗಲೆನ್ ಮೋಕೆ ಮಲ್ತೆ. ಆತ್ ಪೊರ್ತುಗು ಆಯೆ ಮಸ್ತ್ ಸಾಧನೆ ಮಲ್ತ್‌ದ್ ದಶವಾಯು ಸಿದ್ಧಿ ವಿದ್ಯೆನ್ ಕಲ್ತ್‌ದಿತ್ತೆ. ಆ ವಿದ್ಯೆನ್ ಉಪಯೋಗ ಮಲ್ತೊಂದು ಗಾಲಿಡೇ ರಾಜಕುಮಾರಿ ಇತ್ತ್‌ನ ಉಪ್ಪರಿಗೆದ ಮಿತ್ತ್ ಪೋದು ಬರೊಂದಿತ್ತೆ. ಇಂಚನೇ ರಾಜಕುಮಾರಿನ ಮಿತ್ತ್ ಆಯನ ಮೋಕೆ ಪೆಚ್ಚಾಯಿ ಪೊರ್ತುಗು, ಆಯೆ ಅಲೆನೊಟ್ಟುಗು ಸೇರ್ಯರ ರಾತ್ರೆಡ್ಲಾ ಉಪ್ಪರಿಗೆದ ಮಿತ್ತ್ ಪೋದ್, ಯೋಗ ವಿದ್ಯೆದ ಮೂಲಕ ಗವಾಕ್ಷಿಡ್ ಪಿದಾಯಿ ಬರೊಂದಿತ್ತೆ. ಇಂಚ ರಾಜಕುಮಾರಿಡ ಆಯನ ಇನೆಮೋಕೆ ಜಾಸ್ತಿಯಾಯಿನ ಪೊರ್ತುಗು, ಅವು ಅರಸಗ್ ತೆರಿಂಡ್. ರಾಜೆ ಆಯನ್ ಅಲ್ಪನೇ ಪತ್ತೊಡುಂದು ಪೊರ್ತು ಕಾತೊಂದಿತ್ತೆ. ಕಡೆಕ್ ಒಂಜಿದಿನ ರಾತ್ರೆ ರಾಜೆ ಆಯನ್ ಪತ್ಯೆ. ಅಲ್ತ್ ತಪ್ಪಾದ್ ಪೋಯಿನ ರತ್ನಾಕರೆ ರಾತ್ರೆನೇ ಗುರುಕುಲಾಯಿನ ಮಹೇಂದ್ರ ಕೀರ್ತಿನಡೆ ಪೋದು ಅಣುವ್ರತ ದೀಕ್ಷೆ ಗೆತೊಂಡೆ. ಐಡ್ದ್ ಬೊಕ್ಕ ಕುಡ ಆಗಮೊಲೆಡ್ ಬಿರ್ಸಾದಿಗೆನ್ ಹೆಚ್ಚ್ ಮಲ್ತೊನ್ನ ಆಯೆ ದಿಂಜ ಪೊರ್ತು ರಾತ್ರಿ-ಪಗೆಲ್ ಆಧ್ಯಾತ್ಮ ಸಾಧನೆಡ್ ಕಳೆಯೆ. ಆ ಕಾಲೊಡು ವಿಜಯಕೀರ್ತಿ ಪನ್ಪಿನ ಭಟ್ಟಾಚಾರ್ಯೆರ್ನ ಶಿಷ್ಯೆ ಆಯಿನ ವಿಜಯಣ್ಣೆರ್ 'ದ್ವಾದಶಾನುಪ್ರೇಕ್ಷೆ'ಲೆನ್ ಕನ್ನಡೊಡು ಸಂಗೀತದ ರೀತಿಡ್ ವೃತ್ತ-ವಚನ ಛಂದಸ್ಸ್‌ಡ್ ಬರೆಯೆರ್. ಆ ಪುಸ್ತಕೊನು ಆನೆದ ಮಿತ್ತ್ ದೀದ್ ಮೆರವಣಿಗೆ ಮಲ್ತೆರ್. ಐನ್ ತೂಯಿನ ರತ್ನಾಕರೆ ಎಂಕ್‌ಲಾ ಆ ಮಾನಾದಿಗೆ ತಿಕ್ಕೊಡುಂದ್ ಭರತೇಶ್ವರನ ಚರಿತ್ರೆನ್ ಎಣ್‌ಪತ್ತನಾಲ್ ಸಂಧಿಡ್ ಬರೆದ್, ಅವೆನ್ ಆನೆದ ಮಿತ್ತ್ ದೀದ್ ಮೆರವಣಿಗೆ ಮಲ್ಪೊಡುಂದ್ ಕೇಂಡೆ. ಅಪಗ ಭಟ್ಟಾಚಾರ್ಯೆರ್ ಅವೆನ್ ಓದುದು, ನೆಟ್ಟ್ ರಡ್ದ್ ಮೂಜಿ ವಾಕ್ಯೋ ನಮನ ಪುರಾಣೊಗು ವಿರುದ್ಧವಾದ್ ಉಂಡು. ಅಂಚಾದ್ ನೆಕ್ಕ್ ಆನೆದ ಮಿತ್ತ್ ಮೆರವಣಿಗೆದ ಮಾನಾದಿಗೆ ತಿಕ್ಕಂದ್‌ಂದ್ ಪಂಡೆರ್. ಅವ್ವೆ ವಿಷಯ ಮಸ್ತ್ ಜೋರುಡು ಚರ್ಚೆ ಆದ್ ಆಯಗ್ ಊರುಡ್ದು ಬಹಿಷ್ಕಾರ ಪಾಡ್ಯೆರ್. ಊರುದ ಏಳ್‌ನೂದ್ದು ಜೈನೆರ್ನ ಇಲ್ಲಾಡ್ ಆಯಗ್ ಒನಸ್ ತಿಕ್ಕಂದಿ ಪೊರ್ತುಗು ಆಯೆ ಆಯನ ತಂಗಡಿನಲ್ಪ ಒನಸ್

ಮಲ್ತೊಂದಿತ್ತೆ. ಆಂಡ ಉಂದು ಕಡೆಕ್ ಆಯಗ್ ಗರ್ವ ಬರ್ಪಾಂಡ್. ಆತ್ಮೊನು ತೆರಿನಾಯಗ್ ಜಾತಿ ಕುಲ ಒವುಲಾ ಸಮನೇಂದ್ ಪಂಡ್‌ದ್ ಆಯೆ ವೀರಶೈವ ಧರ್ಮೊಗು ಸೇರ್ಯೆರೆ ಆಲೋಚನೆ ಮಲ್ತೆ. ಲಿಂಗೊನು ಕಟ್ಟೊಂಡೆ, ವೀರಶೈವ ಧರ್ಮೊದ ಶಾಸ್ತ್ರ-ಗ್ರಂಥೊಲೆನ್, ಬಸವ ಪುರಾಣೊನು ಓದೊಂಡೆ. ಕೆಲವು ದಿನೊಡ್ದ್ ಬೊಕ್ಕ, ಆಯನ ಕೋಪೊ ಕಡಮೆ ಆದ್, ಕುಡ ದುಂಬುದ ಸಾದಿಗೇ ಬತ್ತ್‌ದ್, ಆವೆನೇ ನಂಬುದು ನಡತ್ತೆ. ರತ್ನಾಕರ ಶತಕ, ಅಪರಾಜಿತ ಶತಕ, ತ್ರಿಲೋಕ ಶತಕ, 2,000ದಾತ್ ಆಧ್ಯಾತ್ಮ ಗೀತೆಲೆನ್ ಬರೆಯೆ... ಚಾಮರಾಜ ಒಡೆಯೆರ್ನ ಕಾಲೊಡು ರತ್ನಾಕರೆ ಬರೆಯಿನ ಭರತೇಶ್ವರ ಚರಿತೆದ ಎಣ್‌ಪತ್ತನಾಲ್ ಸಂಧಿಲೆನ್ ಓದ್ಯೆರ್'' ಪಂಡ್‌ದ್ ದೇವಚಂದ್ರೆ ಪನ್ಪೆ.

ದೇವಚಂದ್ರೆ ಈತ್‌ಮಾತ ವಿಷಯೊನು ವಾ ಆಧಾರೊಡು ಬರೆಯೆ? ಆಯನ ಕಾಲೊದ ಅತ್ತಾಂದ್‌ನ ಕವಿನ ವಿಷಯ ಈತ್ ಆಯಗ್ ಎಂಚ ತೆರಿಂಡ್? ಉಂದು ಒವುಲಾ ನಮಕ್ಕ್ ತೆರಿದ್ ಬರ್ಪುಜಿ. ಆಂಡ ರತ್ನಾಕರೆ ಆಯನ ಬಗ್ಗೆ ದಾಲಾ ಪನಂದಿ ಪೊರ್ತುಡು, ನಮಕ್ಕ್ ದೇವಚಂದ್ರೆ ಒಂತೆ ವಿಷಯ ತೆರಿಪಾದ್ ಸಕಾಯ ಮಲ್ತೆಂದ್ ಪನೊಲಿ. ಬಹುಶಃ ಜನೊಕ್ಲೆನ ಬಾಯಿಡ್ ಇತ್ತ್‌ನ ವಿಷಯೊಲೆನ್ ಕೇಂಡ್‌ದ್ ತೆರಿದ್ ದೇವಚಂದ್ರೆ ಬರೆಯೆನಾ ದಾನ್ನ.

ನನ ಜನೊಕ್ಲೆನ ಬಾಯಿಡ್ ಕಟ್ಟ್‌ಕತೆತ್ತಲೆಕ್ಕ ಪರಡೊಂದು ಬತ್ತಿನ ನನಲಾ ಒಂಜಿ ಸಂಗತಿ ನಮಕ್ ತೆರಿದ್ ಬರ್ಪುಂಡು. ಐಟ್ ಒಂತೆ ಬೇತೆ ವಿಷಯೊಲಾ ಉಂಡು. ಅಂಚಾದ್ ಅವೆನ್ಲಾ ನಮ ತೂವೊಡು. ಉಗ್ರಾಣ ಮಂಗೇಶರಾಯೆರ್ ತ.ಸು. ಶಾಮರಾಯೆರ್ ಸಂಪಾದನೆ ಮಲ್ತಿನ 'ಭರತೇಶ ವೈಭವ' ಗ್ರಂತೊದ ಮುನ್ನುಡಿಟ್ ಆ ಕತೆನ್ ಇಂಚ ಬರೆತ್ತೆರ್ : ''ಚಾರುಕೀರ್ತಿ ಸ್ವಾಮಿಲೆಡ ಎಲ್ಲಿಡೇ ದೀಕ್ಷೆ ಪಡೆಯಿನ ರತ್ನಾಕರೆ ದಿನೊಡ್ದ್ ದಿನೊಕ್ಕು ಮಸ್ತ್ ಪೆರ್ಮೆ ಪಡೆವೊಂದು ಮಲ್ಲಜನ ಆವೊಂದಿತ್ತ್‌ನ ಪೊರ್ತುಡು, ಆಯನ ಸುತ್ತ ಮಸ್ತ್ ಜನ ಶಿಷ್ಯೆರ್ಕುಲು ಸೇರೊಂದಿತ್ತೆರ್. ಅವೆನ್ ತೂದು ಕಿಚ್ಚಿ ಆಯಿನ ಕೆಲವುದಕ್ಲ್ ಆಯಗ್ ಅಪಕೀರ್ತಿ ಕನವೊಡುಂದ್, ಆಯನ ಜೆಪ್ಪುನ ಮಂಚವುದ ಅಡಿಟ್ ಒರ್ತಿ ಸೂಳೆನ್ ದೆಂಗಾದ್ ಕುಲ್ಲಾಯೆರ್. ನೆಡ್ದ್ ಅವಮಾನವಾಯಿನ ರತ್ನಾಕರೆ ಶಿಷ್ಯೆರ್ನಕುಲು ಎಂಚಿನ ಸಮಾಧಾನ ಪಂಡೆರ್‌ಡಲಾ ಕೇನಂದೆ, ಸೀದ ಸುದೆತ್ತಡೆ ಪೋದು ನೀರ್‌ಡ್ ಮುರ್ಕುದು ಲಕ್ಕ್‌ದ್ ಜೈನಧರ್ಮೊಗು ಜಲಾಂಜಲಿ ಕೊರ್ಯೆ ಪಂಡ್‌ದ್ ಘೋಷಣೆ ಮಲ್ತ್‌ದ್, ಕುಡವೊರ ನೀರ್‌ಡ್ದ್ ಮುರ್ಕುದು ಲಕ್ಕ್‌ದ್ ಘಟ್ಟದ ಮಿತ್ತ್ ಪೋಯೆ. ಅಲ್ಪ ಒಂಜಿ ಶೈವಗ್ರಂತೊನು ಆನೆದ ಮಿತ್ತ್ ದೀದ್ ಮೆರವಣಿಗೆ ಮಲ್ಪುನೈನ್ ತೂದ್, ಆ ಗ್ರಂತೊಡು ದಾಲ 'ರಸ' ಇಜ್ಜಿಂದ್ ಮಾತೆರ್ನ ಎದುರುಡೆ ದಾಲಾ ಅಲ್ಕ್‌ದಾಂತೆ ಪಂಡೆ. ಉಂದೆನ್ ಕೇಂಡ್‌ದ್ ಕೋಪ ಬತ್ತ್‌ನ ಜನೊಕ್ಕುಲು ಸೀದಾ ಪೋದು ರಾಜಗ್ ದೂರು ಕೊರ್ಯೆರ್. ರಾಜೆ ರತ್ನಾಕರನ್ ಲೆಪುಡಾದ್ ವಿಚಾರಣೆ ಮಲ್ಪುನಗ, ಆಯೆ ಪೋಡಿಗೆ ದಾಂತೆ ಉತ್ತರ ಕೊರ್ಯೆ. ಸವಾಲ್ ಪಾಡ್ಯೆ. ಅಂಚ ಬಜೀ ಒಂರ್ಭ ತಿಂಗೊಳ್ದು ಪತ್ತ್ ಸಾವಿರ

ಪದ್ಯೊಲಿಪ್ಪುನ 'ಭರತೇಶ ವೈಭವ' ಪನ್ಪಿ ಮಹಾಗ್ರಂಥೊನು ಬರೆದ್ ಕೊರ್ದುಲ ಅಲ್ಪದ ರಾಜನಲಾ ಜನೊಕುಲೆನಲಾ ಪುಗರ್ತೆ ಪಡೆಯೆ. ಐಡ್ದ್ ಬೊಕ್ಕ ರಾಜನ ಪಾತೆರ ಕೇಂಡ್‌ದ್ 'ವೀರಶೈವ' ಧರ್ಮೊಗು ಸೇರ್ಯೆ. ಆಂಡಲಾ ಆಯೆ 'ಯಾನ್ ಸೈತಿಬೊಕ್ಕ ಎನ್ನ ಉತ್ತರಕ್ರಿಯೆನ್ ಮಾತ ಜೈನರೇ ಮಲ್ಪೊಡುಂದ್' ತೆರಿಪಾಯಿನತ್ತಾಂದೆ, 'ಯಾನ್ ಏಪೊಲಾ ಮನಸ್‌ಡ್ ಜೈನೆನೇ ಆದಿತ್ತೆ; ಎನ್ನ ಕಂಟೆಲ್ಡ್ ಕಟ್ಟಿನವು ಲಿಂಗ ಅತ್ತ್, ಗೊಂಟು ಬಜ್ಜೆಯಿ' ಪಂಡ್‌ದ್ ಅವೆನ್ ಮಾತೆರೆಗ್ಲಾ ಪ್ರತ್ಯಕ್ಷ ತೋಜಾದ್ ಕೊರಿಯೆ''

ಈ ಕಥೆಟ್‌ಲಾ ಪೂರಾ ಸತ್ಯ ಇಪ್ಪಂದ್‌ಂದಾಡ್ಲಾ, ಪೂರಾ ಸುಳ್ಳುಲಾ ಆದಿಪ್ಪಂದ್. ನೆಟ್ಟ್‌ಲಾ ನಮಕ್ ಬೋಡಾಯಿನ ರತ್ನಾಕರನ ಬದ್‌ಕ್‌ದ ಕೆಲವು ಸಂಗತಿಲೆನ್ ಪೆಜ್ಜಿದ್ ದೆಪ್ಪೊಡಾಪುಂಡು. ನನ ಮೂಜಿನೆದಾದ್ ಸುರುಟ್ಟೇ ಪಂಡಿಲೆಕ್ಕನೇ ರತ್ನಾಕರವರ್ಣಿನ ಬಗ್ಗೆ ರಡ್ಡ್ 'ಕಾದಂಬರಿ'ಲು ಬೈದ್‌ಂಡ್. ನೆನ್ನ್ ಬರೆನಗಲಾ, ಐನ್ ಬರೆಯಿನಕುಲು ಮಸ್ತ್ ಕಡೆಡ್ದ್ ಮಾಹಿತಿಲೆನ್ ಸಂಗ್ರಹ ಮಲ್ತ್‌ದ್ ಬರೆತ್ತೆರ್. ಆಂಡ ಐತ್ತ ಒಟ್ಟುಗೇ ಐಕುಲು ಕಾದಂಬರಿಲು ಆಯಿನ್ನೈಡ್ದಾತ್ರ ಕೆಲವು ಕಲ್ಪನೆಲೆನ್ಲಾ ಸೇರ್ಸಾದ್ ಪೊರ್ಲುಲ ಮಲ್ದೆರ್. ಐಕ್ಲೆಡ್ಲಾ ನಮ ಸತ್ಯೊಗು ಕೈತಲಿಪ್ಪುನ ಸಂಗತಿಲೆನ್ ಸರಿ ತೂದು ನಾಡ್ದ್ ಪೆಜ್ಜಿದ್ ದೆಪ್ಪೊಡು. ಮುಲ್ಪ ಯಾನ್ ಆ ರಡ್ಡ್ ಕಾದಂಬರಿಲೆಡ್ ಇಪ್ಪುನ ಕತೆನ್ ಪನರ ಪೋಪುಜಿ. ದಾಯೆ ಪಂಡ ಅವು ಬಾರೀ ಮಲ್ಲೆ ಉಂಡು. ಆಂಡ ಆ ಕಾದಂಬರಿಲೆಡ್ ತೋಜದ್ ಬರ್ಪುನ ಸತ್ಯೊಲು, ಅಂಚೆನೆ ನೆಡ್ದ್ ದುಂಬು ಪಂಡಿನ ದೇವಚಂದ್ರೆ ಬೊಕ್ಕ ಜನೊಕ್ಲೆ ಬಾಯಿಡ್ದ್ ಕೇಂಡ್‌ದ್ ಬರೆಯಿನ ಕಟ್ಟ್‌ಕತೆಟ್ಟುಪ್ಪುನ ಸತ್ಯೊಲೆನ್ ದೀವೊಂದು ರತ್ನಾಕರವರ್ಣಿನ ಬಗ್ಗೆ ಒಂತೆ ಪನ್ಪೆ.

★ ★ ★

ಕ್ರಿ.ಶ. ಪದಿನಾಜನೆ ಶತಮಾನದ ಪೊರ್ತುಡು ಕಡಲ ಬರಿತ್ತ ತುಳುನಾಡ್‌ದ ಮಧ್ಯೊಡಿತ್ತ್‌ನ 'ಜೈನಕಾಶಿ' ಬೆದ್ರ ಒಂಜಿ ಮಾಮಲ್ಲ ಬ್ಯಾರೊದ ಕೇಂದ್ರ ಆದಿತ್ತ್‌ಂಡ್. ಅಪಗ ಅಂದಾಜಿ ಏಳ್‌ನೂದ್ದು ಇಲ್ಲುಲು ಜೈನೆರ್ನವ್ವೇ ಇತ್ತ್‌ಂಡ್‌ಂದ್ ತೆರಿದ್ ಬರ್ಪುಂಡು. ಈ ಜೈನೆರೆಡ್ ಹೆಚ್ಚಿನಕ್ಲು ಪಿದಾಯಿ ಊರು-ದೇಶೊಲೆಗ್ ಪೋದು ಬೊಲ್ಲಿ, ಬಂಗಾರ್, ಮುತ್ತ್, ರತ್ನ, ವಜ್ರ, ವೈಡೂರ್ಯ... ಇಂಚ ಬಾರಿ ಬಿಲೆತ್ತ ಸೊತ್ತುಲೆನ್ ಬ್ಯಾರ ಮಲ್ತೊಂದಿತ್ತೆರ್. ಅಪಗ ಮೊಕ್ಲೆಗ್ ಶ್ರೇಷ್ಠಿಲುಂದ್ ಪುದಾರ್ ಇತ್ತ್‌ಂಡ್. ಇತ್ತೆ ಅವ್ವೇ ಶೆಟ್ಟಿಂದ್ ಆತ್‌ಂಡ್. ಇಂಚಿತ್ತಿ ಶ್ರೀಮಂತೆರಾಯಿನ ಶ್ರೇಷ್ಠಿಲ್‌ನಕುಲು ಬೆದ್ರಡ್ ಎಡ್ಡೆ ಬಸ್ತಿಲೆನ್ ಕಟ್ಟಾಯೆರ್, ಮೂರ್ತಿಲೆನ್ ಮಲ್ಪಾಯೆರ್, ದಾನ-ಧರ್ಮ ಮಲ್ತೆರ್. ಇಂಚಿನ ಬೆದ್ರಡ್ ಜೈನೆರ್ನ ಪೇಟೆದ ಜೈನೆರ್ನ ನಡುಟ್ಟು ದೇವರಾಜಯ್ಯೆ ಪನ್ಪಿನಾರ್ ಜೀವನ ಮಲ್ತೊಂದಿತ್ತೆರ್. ಮೇರ್ ಕ್ಷತ್ರಿಯ ರಾಜವಂಶೊಗು ಸೇರಿನ ಎಡ್ಡೆ ಮಾನಾದಿಗೆದ ಇಲ್ಲದಾರ್. ದೇವರಾಜಯ್ಯೆರ್ ಸೂರ್ಯ ವಂಶೊಗು ಸೇರಿನ ಕ್ಷತ್ರಿಯ ಮನೆತನೊದಾರ್ ಆಯಿನ್ನೈಡ್ದಾತ್ರ ಊರ್ದ ಬಾಕಿ ಜೈನ ಶ್ರೇಷ್ಠಿಲೆಕ್ಕ

ಬ್ಯಾರ ಮಲ್ತೊಂದು ಇತ್ತೆರಾ, ಇಜ್ಜಾ ಬೇತೆ ಎಂಚಿನ ಕಸುಬು ಮಲ್ತೊಂದಿತ್ತೆರ್‌ಂದ್ ತೆರಿದ್ ಬರ್ಪುಜಿ. ಈ ದೇವರಾಜಯ್ಯೆರ್ ಶೃಂಗೇರಿದಂಚಿದ ಪೊಣ್ಣನ್ ಮದ್ಮೆ ಆದಿತ್ತೆರ್. ಬುಡೆದಿನ ಪುದರ್ ಯಶಸ್ವತೀಂದ್, ಕುಸುಮಮ್ಮಂದ್ ಕಾದಂಬರಿ ಬರೆಯಿನಕ್ಲ್ ಪಂತೆರ್. ಎಡ್ಡೆ ಆಚಾರ–ವಿಚಾರ ಇತ್ತಿನ ಈ ಸಂಸಾರೊಡು ಮೋಕೆದ ಮಲ್ಲ ಮಗೆ ಆದ್ ರತ್ನಾಕರೆ ಪುಟ್ಯೆ. 'ರತ್ನಾಕರ' ಪಂಡ ನವರತ್ನೊಲೆನ್ ಉಲಾಯಿ ದಿಂಜಾವೊಂದಿಪ್ಪುನ ಮಲ್ಲ ಸಮುದ್ರಾಂದ್ ಅರ್ಥ. ರತ್ನಾಕರಡ್ದ್ ಬೊಕ್ಕ ಪುಟ್ಟಿನಾಲ್ ಆಯನ ತಂಗಡಿ ಮರುದೇವಿ.

ದೇವರಾಜಯ್ಯೆರ್ನ ನೆರೆ–ಕರೆಟ್ಟ್ ಲಿಂಗಾಯಿತೆರ್ನ ಇಲ್ಲ್ ಇತ್ತ್‌ಂಡ್‌ಂದ್, ಆ ಇಲ್ಲದ ಪೊಂಜೊವುಲಾ ಶೃಂಗೇರಿದಂಚಿಡ್ದೇ ಮದಿಮೆ ಆದ್ ಬತ್ತಿನಾಲ್‌ಂದ್, ಆ ರಡ್ಡ್ ಇಲ್ಲದಕ್ಲೆಗ್ಲಾ ಭಾರೀ ಎಡ್ಡೆ ಇತ್ತ್‌ಂಡ್‌ಂದ್, ಆ ಕೈತಲ್ದ ಲಿಂಗಾಯಿತೆರೆ ಇಲ್ಲಡ್ ರತ್ನಾಕರನನೇ ಪ್ರಾಯೊದ ಗಿರಿಜೆ ಪನ್ಪಿ ಒರ್ತಿ ಪೊಣ್ಣು ಬಾಲೆ ಇತ್ತೊಲುಂದು; ರತ್ನಾಕರೆ, ಮರುದೇವಿ, ಗಿರಿಜೆ – ಮೊಕ್ಲು ಮೂಜಿ ಜನಲಾ ಏಪಲಾ ಒಟ್ಟುಗು ಸೇರೊಂದು ಗೊಬ್ಬೊಂದು ಮೋಕೆಡಿತ್ತೆರ್‌ಂದ್ ಕಾದಂಬರಿ ಬರೆಯಿನಕ್ಲ್ ತೆರಿಪಾವೆರ್. ರತ್ನಾಕರಗ್ ಒಂತೆ ಪ್ರಾಯ ಆನಗ ಬರವು ಕಲ್ಪೆರಾಂದ್ ಬೆದ್ರದ ಜೈನ ಮಠೊಕ್ಕು ಪೋವರ ಸುರುಮಲ್ತೆ. ಅಲ್ಪ ಎಡ್ಡೆ ತೆರಿದ್‌ನ ಶಾಸ್ತ್ರಿಲು ಊರ್ದ ಜೈನರೆ ಜೋಕ್ಲೆನ್ ಒಟ್ಟು ಸೇರಾವೊಂದು ಬರವು ಕಲ್ಪಾವೊಂದಿತ್ತೆರ್. ಅಪಗ ಇತ್ತೆದ ಲೆಕ ಸ್ಲೇಟ್, ಕಡ್ಡಿ, ಪೆನ್ನ್, ಪೆನ್ಸಿಲ್, ಕಾಗಜಿ ಇಜ್ಜಾಂದಿನ ಕಾಲ. ತೆರಿದ್‌ನಕ್ಲ್ ದಾಲ ಗ್ರಂಥೊ ಮಿನಿ ಬರೆವೊಡುಂದಾಂಡ ತಾರಿದೋಲೆದ ಮಿತ್ತ್ ಕಬ್ಬೊದ ಕಂಠೊಡು ಬರೆವೊಂದಿತ್ತೆರ್. ಆ ಪೊರ್ತುಡು ಜೋಕ್ಲೆಗ್ ಅರಿಟ್ಟ್ ಪೊಯ್ಯೆಡ್ ಬಿರೆಲ್ ತಿರ್ಗಾದ್ ಅಕ್ಷರ ಕಲ್ಪಾವೊಂದಿತ್ತೆರ್. ಆ ಪೊರ್ತುಡು ಅಂಚನೆ ಬರವು ಕಲ್ತೆ. ಅಪಗ ಇಲ್ಲ್ ಇಲ್ಲಡ್, ಮಠೊಟ್ಟು ಮಾತ ಪುರಾಣ ಓದುನ ಕ್ರಮ ಇತ್ತ್‌ಂಡ್. ಶಾಸ್ತ್ರಿಲುಲಾ ಜೋಕ್ಲೆಗ್ ಪುರಾಣ ಓದು ಪನೊಂದಿತ್ತೆರ್; ಅಂಚನೆ ಮಠೊಟ್ಟು ಸ್ವಾಮಿಲುಲಾ ಜನೊಕ್ಲೆಗಾತ್ರ ಪುರಾಣ ಓದೊಂದು, ಓದ್‌ಪಾವೊಂದು ಇತ್ತೆರ್. ರತ್ನಾಕರೆ, ಇಲ್ಲಡ್, ಮಠೊಟ್ಟು ಈ ಪುರಾಣ ಓದುನ್ಯೆನ್ಲಾ ಕೇಂಡ್‌ದ್ ಮಲ್ಲ ಬಿರ್ಸೆ ಆಯೆ. ಆಯಗ್ ಜೈನ ಪುರಾಣೊದ ಮಿತ್ತ್, ಕಾವ್ಯದ ಮಿತ್ತ್ ಎಡ್ಡೆ ರುಚಿ ಪುಟ್ಟುಂಡ್. ಐಟ್‌ಲಾ ಆಯಗ್ ಮಸ್ತ್ ಕುಸಿ ಕೊರಿನ್ನ ಕಾವ್ಯ ಪಂಡ 'ಆದಿಪುರಾಣ'. ಐತ ಉಲಾಯಿಡ್ ಬರ್ಪುನ ಭರತ–ಬಾಹುಬಲಿನ ಕತೆನ್ ರತ್ನಾಕರೆ ಮನಸ್‌ದೀದ್ ಮೋಕೆಡ್ ಕೇಂಡ್‌ದಿಪ್ಪೊಡು.

ಉಂದ್‌ವೇ ಪೊರ್ತುಡು ನೆನೆತ್ತೊನೊಡಾಯಿನ ನನೊಂಜಿ ಸಂಗತಿ ಪಂಡ, ಉಂದು ಹರಿದಾಸೆರೆನಕ್ಲೆ ಕಾಲ. ಬೆದ್ರಡ್‌ಲಾ ವಿಷ್ಣುಭಕ್ತೆರಾಯಿನ ಹರಿದಾಸೆರ್ನಕ್‌ಲ್ 'ಕೀರ್ತನೆ' ಪನ್ಪಿ ಭಜನೆಲೆನ್ ಪಂಡೊಂದು ಊರುಡು ತಿರ್ಗೊಂದಿತ್ತೆರ್‌ಂದ್ ತೋಜುಂಡು. ಅಪಗ ಪದ ಪನೊಂದು ಪೋಪಿನ ದಾಸೆರ್ನಕ್‌ಲ್ನ ಪಿರಾವುಡ್ದ್ ಭಜನೆಲೆನ್ ಕೇನೊಂದು ರತ್ನಾಕರೆ ಪೋವೊಂದಿತ್ತೆಂದ್ ಕಾದಂಬರಿ ಬರೆಯಿನಕುಲು ಪಂತೆರ್. ಉಂದು ಸತ್ಯಾಂದೆ ಪನೊಲಿ. ದಾಯೆ ಪಂಡ ಇಂಚ ದಾಸೆರ್ನ ಪಿರಾಡ್ದ್ ತಿರ್ಗಿನ ರತ್ನಾಕರಗ್ ''ಆಧ್ಯಾತ್ಮ ಗೀತೆಲು'' ಪನ್ಪಿನ ಭಜನೆ ಪದ್ಯೊಲೆನ್ ಬರೆವರ ಸ್ಫೂರ್ತಿಯಾಂಡ್‌ಂದ್ ತೋಜುಂಡು. ಹರಿದಾಸೆರ್ನ

ಪೊರ್ಲುದ ಕೀರ್ತನೆಲು ಆಯನ್ ಮಲ್ತ್‌ಕಟ್ಟಾದ್ ತಾನ್‌ಲಾ ಅಂಚಿನನೆ ಪದ್ಯೊಲೆನ್ ಬರೆವೊಡು ಪನ್ಪಿ ಅರ್ತಿ ಪುಟ್ಟಾದಿಪ್ಪೊಡು. ದುಂಬೇ 'ಆದಿಪುರಾಣ'ದಂಚಿನ ಕಾವ್ಯೊಲೆನ ಪೊರ್ಲು-ತಿರ್ಲ್‌ಗ್ ಮರ್ಲ್‌ದ್‌ನ ಆಯೆ ಪಗೆಲ್‌ಡ್ ದಾಸೆರ್ನ ಪದ್ಯೊಲೆನ್ ಕೇಂದ್, ರಾತ್ರೆ ಕುಲೋಂದು ಅಂಚಿನನೇ ಪದ್ಯೊಲೆನ್ ಬರೆದಿಪ್ಪೊಡು.

ನೆಕ್ಕ್ ಒತ್ತು ಕೊರ್ಪುಲೆಕ್ಕ ರತ್ನಾಕರೆ ಎಲ್ಲಿಡೇ ಕಾವ್ಯರಚನೆದ ಬಗೆಟ್ ಮಸ್ತ್ ಉಮೇದ್ ತೋಜಾದಿತ್ತೆ; ಐತ ಬಗ್ಗೆ ದಿಂಜ ವಿಷಯೊಲೆನ್ ತೆರಿಯೊನ್ರೆ ಪ್ರಯತ್ನ ಮಲ್ದಿತ್ತೆಂದ್ಲ ತೆರಿದ್ ಬರ್ಪುಂಡು. ಎಂಚ ಪಂಡ ದೇವಚಂದ್ರೆ ರಾಜಾವಳೀ ಕಥೆಟ್ಟ್ ಪಂಡಿಲೆಕ್ಕ 'ರತ್ನಾಕರೆ ಎಲ್ಲಿಡೇ ಕಾವ್ಯಾಲಂಕಾರ ಲಕ್ಷಣ ಶಾಸ್ತ್ರೊಲೆಡ್ ದಿಂಜ ಬಿರ್ಸೆ ಆದ್, ಸಾರತ್ರಯೊಕ್ಕು ಕೇಶವ ವರ್ಣ್ಯೆರ್ ಬರೆಯಿನ ವ್ಯಾಖ್ಯಾನೊಲೆನ್ಲಾ, ಕುಂದ ಕುಂದಾಚಾರ್ಯೆರ್ನ ಆಧ್ಯಾತ್ಮ ಸಿದ್ಧಾಂತೊಲೆಗ್ ಪ್ರಭೇಂದು ಬರೆಯಿನ ಟೀಕೆಲೆನ್ಲಾ, ಸಮಾಧಿ ಶತಕ ಏಕಸಪ್ತತಿ ಸ್ವರೂಪ-ಸಂಬೋಧನೆ ಇಂಚಿತ್ತಿ ಮಸ್ತ್ ಓದುದು ಮಲ್ಲ ಆಗಮ ಗ್ರಂಥೊಲೆನ್ಲಾ ಎಡ್ಡೆ ಮನಸ್‌ದೀದ್ ಮಲ್ಲ ಕವಿ ಆಯೆ.' ನೆಡ್ದ್ ಎಲ್ಲಿಡೇ ಆಯಡ ಇತ್ತಿನ ಬರವುದ ಬಿರ್ಸಾದಿಗೆ ತೋಜಿದ್ ಬರ್ಪುಂಡು.

ನನಲಾ ಒಂಜಿ ತಿಳುವಳಿಕೆದ ಪ್ರಕಾರ ರತ್ನಾಕರೆ ಜವನಾದಿಗೆಗ್ ಬರ್ಪುನ ಆ ಪೊರ್ತುಡು ಎಡ್ಡೆ ರಾಗೊಡ್ ಪನೊಲಿಯಾಯಿನ ಕೀರ್ತನೆಲು ಅತ್ತಂದೆ, ಭರತೇಶ ವೈಭವದ ಪ್ರತೀ ಸಂಧಿದ ಸುರುಟ್ಟು ತಿಕ್ಕುನ 'ನಿರಂಜನ ಸ್ತುತಿ' ಪನ್ಪಿ ಪೊರ್ಲುದ ಸಾಂಗತ್ಯ ಪದ್ಯೊಲೆನ್ಲಾ ಬರೆದಿಪ್ಪೊಡುಂದ್ ತೆರಿನಕ್ಲ್ ಪಂತೆರ್. ದಾಯೆ ಪಂಡ ಆ ಪೊರ್ತುಗು ರತ್ನಾಕರನ ಮಸ್ತ್ ಪದ್ಯೊಲೆನ್ ಬೆದ್ರದ ಇಲ್ಲ್ ಇಲ್ಲಡ್ ಪನೊಂದಿತ್ತೆರ್‌ಂದ್ ತೆರಿದ್ ಬರ್ಪುಂಡು. ಅಂಚ ಪನೊಡುಂದಾಂಡ ಅವು ಈ ಕೀರ್ತನೆ ಬೊಕ್ಕ ನಿರಂಜನ ಸ್ತುತಿಕ್ಕುಲೇ ಆದಿಪ್ಪೊಡು. ಒಟ್ಟಾರೆ ರತ್ನಾಕರೆ ಆ ಪೊರ್ತುಗು ಆಯನ ಪೊರ್ಲುದ ಕಾವ್ಯೊಲೆಡ್‌ದಾತ್ರ ಊರುಡು ಎಡ್ಡೆ ಪುಗರ್ತೆ ಪಡೆಯೆ. ಕೆಲವು ವಿದ್ವಾಂಸೆರ್ನಕುಲು ರತ್ನಾಕರನ ಶತಕೊಲೆಡ್ ಒಂಜಾಯಿನ, ಬೇತೆಕ್ಲೆಗ್ ತಾರ್ಕಣೆ ಮಲ್ತ್ಂಡ ಆತ್ ಎಡ್ಡೆಂದ್ ಪನರೆ ಆವಂದಿನ 'ತ್ರಿಲೋಕ ಶತಕ' ಪನ್ಪಿ ಕಾವ್ಯೊನು ಈ ದಿನೊಕ್ಲೆಡೇ ಬರೆದಿಪ್ಪೊಡೊಂದ್ ಪನ್ಪೆರ್. ಅಂತೂ ಎಲ್ಲಿಡೇ ಆಯೆ ಮಲ್ಲ ಕವಿ ಆಪುನ ಲಕ್ಷಣ ತೋಜಿದ್ ಬತ್ತ್ಂಡ್ ಪನ್ಪಿನವು ಸತ್ಯ.

ಬೆದ್ರದ ಏಳ್‌ನೂದು ಜೈನೆರ್ನ ಇಲ್ಲಲೆಡ್ ದಿನೊಲಾ ಬೈಯದ ಪೊರ್ತುಗು ರತ್ನಾಕರನ ಪದ್ಯೊಲು ಕೇನರೆ ಸುರುವಾಂಡ್. ಆಯಗ್ ಬಾರೀ ಮೋಕೆದ ಸಾಂಗತ್ಯೊಲಂತೂ ಏರಾಂಡ್ಲ ಪನೊಂದಿತ್ತ್‌ನೈನ ಕೇಂಡ, ಒರ ಅಡೇಗೆ ಬತ್ತ್‌ದ್ ಕೇನ್ಗ ಪನ್ಪಿನ ರೀತಿದ ಪದ್ಯೊಲು. ಅಂಚಾದ್ ಅಂಚಿನ ಪದ್ಯೊಲೆಡ್ದಾತ್ರ ಕವಿ ರತ್ನಾಕರನ ಪುದರ್ ಊರುಡು ಮಾತ್ರ ಅತ್ತ್ ಪರಊರುಡ್ಲಾ ಪರಡ್‌ಂಡ್. ಕಾರ್ಲದ ಅರಸುಲೆನ ಕೆಬಿಕ್ಲಾ ಮುಟ್ಟ್ಂಡ್.

ಆ ಪೊರ್ತುಡು ಕಾರ್ಲದೂರುಲಾ ಬೆದ್ರದ ಊರ್ದಲೆಕ್ಕನೇ ಪದಿನೆಣ್ಮ ಬಸದಿಲೆಡ್‌ದಾತ್ರ ಒಂಜಿ ಪುಣ್ಯಾದಿಗೆದ ಕ್ಷೇತ್ರ ಆದಿತ್ತ್ಂಡ್. ಆತೆ ಅತ್ತಾಂದೆ ಅವು ಬೈರವ

ಅರಸೆರ್ನ ರಾಜಧಾನಿ ಆದಿತ್ತ್‌ಂಡ್. ರತ್ನಾಕರೆ ಬೆದ್ರಡ್ ಪುಗರ್ತೆ ಪಡೆವೊಂದಿತ್ತಿನ ಪೊರ್ತುಡು, ಕಾರ್ಲಡ್ ಚಂದ್ರವಂಶದ ಇಮ್ಮಡಿ ವೀರಭೈರವರಸೆ ಆಡಳ್ತೆ ಮಲ್ತೊಂದಿತ್ತ್. ಆಯಗ್ ಬೆದ್ರದ ಸೂರ್ಯವಂಶದ ರಾಜಮನೆತನೊಕ್ಕು ಸೇರಿನ ದೇವರಾಜಯ್ಯೆರೆನ ಮಗೆ ರತ್ನಾಕರನ ಬರವುದ ಬಿರ್ಸಾದಿಗೆದ ಸುದ್ದಿ ತಿಕ್ಕ್‌ಂಡ್. ಆಯನ್ ರಾಜೆ ಓಲಗ ಚಾವಡಿಗ್ ಲೆಪುಡಾದ್ ಇಸಯೋ ತೆರಿಯೊಂಡೆ. ರತ್ನಾಕರನ ಕಾವ್ಯ ಪ್ರತಿಭೆನ್ ಕಣ್ಣಾರೆ ತೂಯಿನ ಭೈರವ ರಾಜೆ ಆಯನ್ ಕಾರ್ಲದ ಅರಮನೆಟ್ 'ಆಸ್ಥಾನ ಕವಿ' ಆವೊಡುಂದ್ ಕೇಂಡೆ. ಬೆಚ್ಚ ನೆತ್ತೆರ್ದ ಉಲ್ಲೆಸ ಉರ್ಕುನ ಜವನೆ ರತ್ನಾಕರೆ, ಉಂದು ಪದ ಬರೆವರ ಒಂಜಿ ಎಡ್ಡೆ ಅವಕಾಶಾಂದ್ ಎನ್ನ್‌ದ್ ಒತ್ತೊಂಡೆ. ಕಾರ್ಲ ಸೇರೊಂಡೆ.

ಇತ್ತೆ ಆಯನ ಕಾವ್ಯ ಬರೆಪ್ಪುನ ಉಮೇದ್‌ಗ್ ರೆಂಕೆ ಬತ್ತ್‌ಲೆಕ್ಕ ಆಂಡ್. ಎಡ್ಡೆ ಜಾಗೆಡ್ ಆಯನ ಬಿರ್ಸಾದಿಗೆಗ್ ಒಂಜಿ ಎಡ್ಡೆ ನಿಲೆ-ಬಿಲೆ ತಿಕ್ಕ್‌ಂಡ್. ಅವು ಆಯನ ಯೋಗ್ಯತೆಡ್ದ್ ಆಯಗ್ ತಿಕ್ಕಿನ ಮಾನಾದಿಗೆ ಅತ್ತಂದೆ ಬೇತೆ ದಾಲಾ ಅತ್ತ್‌ಂದ್ ಪನೊಲಿ. ಇಪ್ಪಡ್, ಅಂತೂ ದುಂಬೇ ಪದ್ಯ ಬರೆಪ್ಪುನು ಪಂಡ ಮಸ್ತ್ ಕುಷಿ ಪಡೆವೊಂದಿತ್ತಿನ ರತ್ನಾಕರಗ್ ಇತ್ತೆ ಅವ್ವೇ ಬೇಲೆ ಆಂಡ್. ಆಸ್ಥಾನ ಕವಿಯಾಯಿನ ಈ ಪೊರ್ತುಡು ಆಯೆ ಇತೊರ್ತು ಮಲ್ತೊಂದಿತ್ತಿನ ಪೊಡಿ ಬರವಣಿಗೆ ಬುಡುದು, ದಾದಾಂಡ್ಲ ಮಲ್ಲಗ್ರಂಥ ಬರೆವೊಡುಂದ್ ಯೋಚನೆ ಮಲ್ತಿಪ್ಪೊಡು. ಅಪಗ ಆಯಗ್ ಮಠೊಟ್ಟು ಇಲ್ಲಡ್ ಎಲ್ಲಿಡೇ ಕೇನ್ನ 'ಆದಿಪುರಾಣ' ನೆನಪಾದಿಪ್ಪೊಡು. ಐಟ್‌ಲಾ ಆಯಗ್ ಬಾರಿ ಆರ್ತಿ ಆಯಿನ ಭರತ ಚಕ್ರವರ್ತಿನ್ ದುಂಬುದೀವೊಂದು, ಪೊಸ ರೀತಿಡ್ ಕಾವ್ಯ ಬರೆವೊಡುಂದ್ ಮನಸ್ ಮಲ್ತ್‌ದಿಪ್ಪೊಡು. ಅಂಚ ಈ ಪೊರ್ತುಡು ಆಯೆ 'ಭರತೇಶ ವೈಭವ' ಬರೆಯೆರೆ ಸುರು ಮಲ್ತೆಂದ್ ಪನೊಲಿ. ದಾಯೆ ಪಂಡ 'ಭರತೇಶ ವೈಭವ' ಬರೆಯೆರೆ ಏಪ ಸುರುಮಲ್ತೆಂದ್ ಸರಿಯಾದ್ ಗೊತ್ತಿಜ್ಜಿ. ಕೆಲವೆರ್ ಆಯೆ ಆಸ್ಥಾನ ಕವಿ ಆಯಿಬೊಕ್ಕ ಬೆದ್ರಗ್ ಪೋದು, ಔಲು ವಿಜಯಣ್ಣ ಕವಿನ 'ದ್ವಾದಶಾನುಪ್ರೇಕ್ಷೆ' ಪನ್ಪಿ ಗ್ರಂಥೊನು ಆನೆದ ಮಿತ್ತ್ ದೀದ್ ಮೆರವಣಿಗೆ ಮಲ್ತೊಂದಿಪ್ಪುನೈನ್ ತೂದ್ ಎಂಕ್‌ಲಾ ಅಂಚೆನೆ ಮಾನಾದಿಗೆ ತಿಕ್ಕೊಡುಂದ್ 'ಭರತೇಶ ವೈಭವ' ಬರೆಯೆಂದ್ ಕೆಲವುದಕ್ಲು ಪನ್ಪೆರ್. ಬೊಕ್ಕ ಕೆಲವುದಕ್ಲ್ ಆಯೆ ಜೈನಧರ್ಮ ಬುಡ್ದ್ ಘಟ್ಟಗ್ ಪೋಯನಲ್ಪ, ಬೇತೆ ಶೈವಗ್ರಂಥ ಮೆರವಣಿಗೆ ಮಲ್ಪುನೈನ್ ತೂದ್, ಐಟ್ ದಾಲಾ ರಸ ಇಜ್ಜಿಂದ್ ಪಂಡ್‌ದ್, ಐಕ್ ಸವಾಲಾದ್ ರಸವತ್ತಾಯಿನ 'ಭರತೇಶ ವೈಭವೊ'ನು ಬರೆಯೆಂದ್ ಪನ್ಪೆರ್. ಕಾದಂಬರಿಕಾರೆರ್ನಕ್ಲ್ ಆಯೆ ಆಸ್ಥಾನ ಕವಿಯಾಯಿನ ಪೊರ್ತುಡೇ ಬರೆಯಿನ ನಿರಂಜನ ಸ್ತುತಿನ್ ದುಂಬು ದೀವೊಂದು ಪೊರ್ಲುದ ರಾಗೊಡು ಪನೊಲಿಯಾಯಿನಂಚಿತ್ತಿನ 'ಸಾಂಗತ್ಯ' ಶೈಲಿಡ್ ಭರತೇಶ ವೈಭವೊನು ಬರೆಯೆ. ಉಂದುವೇ ಪೊರ್ತುಡು ಆಯೆ ಈ ಕಾವ್ಯೊನು ಬರೆಯೇಂದ್ ಪನರೆ ನನವೊಂಜಿ ಕಾರಣ, ಐಟಿತ್ತಿನ ಶೃಂಗಾರ ವರ್ಣನೆ. ಅವು ಆಯೆ ಅಲ್ತ ರಾಜಕುಮಾರಿನ್ ಮೋಕೆ ಮಲ್ತ್‌ನೈತ್ತ ಫಲಾಂದ್ ಮಸ್ತ್‌ಜನ ಪನ್ಪೆರ್.

ಬಹುಶಃ ಇಂಚ ಆದಿಪ್ಪೊಡು. ಆಸ್ಥಾನ ಕವಿ ರತ್ನಾಕರೆ ರಾಜನ ಓಲಗ ಚಾವಡಿಡ್ ಅಪಗದ ಕ್ರಮೊತ್ತಲೆಕ್ಕ ತಾನ್ ಬರೆಯಿನ ಕಾವ್ಯೊಲೆನ್ ಓದುದಿಪ್ಪೊಡು. ಐನ್ ಕೇಂಡ್‌ದ್ ರಾಜೆಲಾ ಬೆರಿ ಬೊಟ್ಟೊಂದಿತ್ತೆ. ಉಂದು ಪೂರಾ ಮಸ್ತ್‌ಜನ ಆಯನ್ ಮೆಚ್ಚುಲೆಕ ಆಂಡ್. ಐಟ್ಲಾ ಇಮ್ಮಡಿ ವೀರಭೈರವನ ಮಗಲೆಗ್ ರತ್ನಾಕರನ ಕಾವ್ಯೊಡ್ಲಾ, ಬರೆಯಿನ ಆಯನ ಮಿತ್ತ್‌ಲಾ ಮಸ್ತ್ ಮೋಕೆ ಪುಟ್ಟಾಂಡ್. ಅಂಚೆನೆ ಆ ರಾಜಕುಮಾರಿ ಶಾಂತಲೆಲಾ ಎಡ್ಡೆ ಚಿತ್ರ ಕಲಾವಿದೆ ಆದಿತ್ತೊಲುಂದ್ ಕಾದಂಬರಿಕಾರೆರ್‌ನಕ್ಲ್ ಪಂತೆರ್. ಅಂಚ ರಾಜಕುಮಾರಿ ಬುಡ್ಪಾಯಿನ ಚಿತ್ರಲಾ, ಐನ್ ಬುಡ್ಪಾಯಿನ ಆಲ್‌ಲಾ ರತ್ನಾಕರಗ್ ಪೊರ್ಲುಗು ತೋಜಿಯೆರ್. ಒಟ್ಟಾರೆ ಎಡ್ಡೆ ಬಿಸ್ರಾದಿಗೆದ ಅಕ್ಲ್ ಇರ್ವೆರ್ಲಾ ಒರ್ಯನೊರಿ ಮೆಚ್ಚೊಂಡೆರ್. ಬೊಕ್ಕ ಅವ್ವೇ ಮೋಕೆಡ್ ಅಕ್ಲ್ ಅಪಗಪಗ ತಿಕ್ಕ್‌ದ್ ಪಾತೆರಿಯರ ಸುರುಮಲ್ತೆರ್. ಉಂದು ಭರತೇಶ ವೈಭವೊದ ಶೃಂಗಾರ ವರ್ಣನೆಗ್ ಶಕ್ತಿ ಕೊರುಂಡು.

ರಾಜಗ್ ಆಸ್ಥಾನೊಡು ರತ್ನಾಕರನ ಶೃಂಗಾರ ವರ್ಣನೆದ ಪದ್ಯೊಲೆನ್ ಕೇಂಡ್‌ದ್ ಭಾರೀ ಕುಸಿಯಾದಿಪ್ಪೊಡು. ಐಕಾತ್ರ ಆಯೆ ಇಂಬ್ಯಗ್ 'ಶೃಂಗಾರ ಕವಿ ಹಂಸರಾಜ' ಪಂಡ್‌ದ್ ಬಿರುದು ಕೊರ್ದು, ಮಾನಾದಿಗೆಲಾ ಮಲ್ತೆ. ಇಜ್ಜಿ ಈ ಬಿರುದುನು ಬೆದ್ರದ ಪಂಡಿತ ಮಂಡಲಿಡ್, ಗುರು ಮಾಹೇಂದ್ರ ಕೀರ್ತಿ ಕೊರ್ಪಾರ್ಯೆರ್‌ಂದ್ ರಾಮೋ ವಿಶ್ವಾಮಿತ್ರೆರ್ ಆರ್ನ ಕಾದಂಬರಿಡ್ ಬರೆತ್ತೆರ್. ಇಪ್ಪಡ್, ಅಂತೂ ಆಯನ ಬರವುಗು ಸರಿಯಾಯಿನ ಪುಗರ್ತೆ ಪಡೆಯಿನ ರತ್ನಾಕರೆ ರಾಜನ ಒರ್ತಿಯೇ ಮಗಲೆ ಶಾಂತಲೆಗ್ ಮಸ್ತ್ ಕೈತಲಾಯೆ. ಆಲ್ ಆಯನ ಎಡ್ಡೆ ಪದ್ಯೊಲೆಗ್ ಪೊರ್ಲುದ ರಾಗ ಪಾಡ್‌ದ್ಲಾ ಪನೊಂದಿತ್ತೊಲುಗೆ. ಆಯೆ ಆಲೆನ ಚಿತ್ರೊಲೆನ್ ಪುಗರೊಂದಿತ್ತೆಗೆ. ಇಂಚ ರಾಜಕುಮಾರಿನ ಸಹವಾಸೊಡು ಇತ್ತಿನ ರತ್ನಾಕರನ ಬರವುಡ್ಲಾ, ಬದ್‌ಕ್‌ಡ್ಲಾ 'ಶೃಂಗಾರ' ಮಿತಿ ಮೀರ್ದ್ ಪೋಂಡು. 'ಭರತೇಶ ವೈಭವ' ಅಯ್ಯಯ್ಯ ಎಂಚ ಪೊರ್ಲಾಂಡ್‌ದ್ ಪನ್ಪುನಲೆಕ್ಕ ಆಂಡ್.

'ರಾಜಾವಳಿ ಕಥೆ' ಬರೆಯಿನ ದೇವಚಂದ್ರನ ಪ್ರಕಾರ ಉಂದುವೇ ಪೊರ್ತುಡು ರತ್ನಾಕರೆ 'ಯೋಗ' ಸಾಧನೆಲಾ ಮಲ್ತೊಂದಿತ್ತೆ. ಯೋಗೊಗು ಸಂಬಂಧಪಟ್ಟಿನ ಮಸ್ತ್ ಶಾಸ್ತ್ರ ಗ್ರಂತೊಲೆನ್ ಆಯೆ ಓದುದ್ ತೆರಿಯೆ. ಯೋಗೊದ ಬಗೆಟ್ ಆಯಗ್ ಎಡ್ಡೆ ತಿಳುವಳಿಕೆ ಇತ್ತ್‌ಂಡ್‌ಂದ್ ನಮಕ್ಕ್ ಭರತೇಶ ವೈಭವೊಡ್ದ್‌ಲಾ ತೆರಿದ್ ಬರ್ಪುಂಡು. ಇಂಚ ರತ್ನಾಕರನ ಯೋಗ ಸಾಧನೆ ಓಡೆಮುಟ್ಟ ಮುಟ್ಟುಂಡು ಪಂಡ, ಆಯೆ ಐಡ್‌ದಾತ್ರ 'ದಶವಾಯು ಸಿದ್ಧಿ' ಪನ್ಪಿನ ವಿದ್ಯೆನ್ ಕೈವಶ ಮಲ್ತೊಂಡೆ. ಪಂಡ ಆಯೆ ನಿಲತ್ತ ಮಿತ್ತ್ ಮಾತ್ರ ಅತ್ತಾಂದೆ ಗಾಳಿಡ್ ಓಡೆ ಬೋಡಾಂಡ್ಲಾ ಪೊವರ–ಬರಿಯರ ಕಲ್ತೊಂಡೆ. ಗಾಳಿ ಪೋಯಿನಲ್ಪ ಪೂರ ಪೋದು–ಬರ್ಪಿನಂಚಿತ್ತಿನ ವಿದ್ಯೆ ಅವು. ಉಂದೆನ್ ಆಯೆ ಒಂಜಿ ಸರ್ತಿ ಬೆದ್ರಗ್ ಪೋಯಿನ ಪೊರ್ತುಡು ಅಂಚೆನೇ ಕುಡ್ಲದಂಚಿ ಪೋನಗ, ಅಲ್ಪ ಒರಿ ಸನ್ಯಾಸಿಡ್ದ್ ಈ ದಶವಾಯು ಸಿದ್ಧಿ ವಿದ್ಯೆನ್ ಪಡೆಯೆಂದ್ 'ರತ್ನಾಕರ' ಕಾದಂಬರಿ ಬರೆಯಿನಕ್ಲ್ ಪಂತೆರ್. ಅಕುಲು ಪನ್ಪಿ ಪ್ರಕಾರ ರತ್ನಾಕರೆ ಬೆದ್ರದ ಇಲ್ಲಡೆ ಪೋನಗ, ಆಯನ ಕೈತಲ್ದ ಇಲ್ಲದ ಲಿಂಗಾಯಿತೆರೆ ಸಂಸಾರದ

ಗಿರಿಜೆಗ್ ಹಿರಿಯಾಕ್ಲ್ ಮದಿಮೆ ಮಲ್ಪರೆ ಪ್ರಯತ್ನ ಮಲ್ತ್‌ನ ಸುದ್ದಿ, ಅಂಚೆನೆ ಆಲ್ ಮದ್ಮೆ ಬೊಡ್ಚಿಂದ್ ಪಂಡ್‌ದ್ 'ಶಿವದೀಕ್ಷೆ' ಗೆತೊಂದು ಗಟ್ಟದ ಮಿತ್ತ್‌ದ ಬಾಳೆಹೊನ್ನೂರುದ ರಂಬಾಪುರಿ ಮಠೊಕ್ಕು ಪೋಯೊಲು ಪನ್ಪಿ ಸುದ್ದಿ ತೆರಿಯೆ. ಎಲ್ಲಿಡ್ದಿಂಚ ಒಟ್ಟುಗು ಮೋಕೆಡಿತ್ತಿನ ಗಿರಿಜೆಗ್ ಇಂಚ ಆಂಡತ್ತ ಪಂಡ್‌ದ್ ಬೇಜಾರ್ ಮಲ್ತ್‌ನ ರತ್ನಾಕರೆ ಅಲ್ತ್‌ಡ್ದ್ ಸೀದಾ ಕುಡ್ಲದಂಚಿ ಪೋಯೆ. ಗುರುಪುರತ್ತಲ್ಪ ಒರಿ ಸನ್ಯಾಸಿ ತಿಕ್ಕ್‌ದ್, ಇಂಬ್ಯನ್ ಪಾತೆರ್‌ಪಾದ್ 'ದಶವಾಯು ಸಿದ್ಧಿ' ವಿದ್ಯೆನ್ ಪಂಡ್‌ದ್ ಕೊರಿಯೆ. ಅವೆನ್ ಪತೊಂದ್ ರತ್ನಾಕರೆ ಕಾರ್ಲಗ್ ಬತ್ತೆ. ಉಂದು ಕಾದಂಬರಿಡ್ ತಿಕ್ಕುನ ವಿವರ. ಸತ್ಯನಾ ಸುಳ್ಳಾಂದ್ ತೆರಿಯಂದ್. ಅಂತೂ ಇಂಚಿನ ಒಂಜಿ ವಿಶೇಷ ವಿದ್ಯೆದ ಸಿದ್ಧಿ ಆಯಗ್ ತಿಕ್ಕ್‌ದಿತ್ತ್‌ಂಡ್‌ಂದ್ ಪನ್ಪಿನವು ಸತ್ಯ ಇಪ್ಪೊಡು.

'ದಶವಾಯು ಸಿದ್ಧಿ' ವಿದ್ಯೆನ್ ತನ್ನ ಮೋಕೆದ ವ್ಯವಹಾರೊಗು ಉಪಯೋಗ ಮಲ್ತೊಂಡೆ. ಪಗೆಲ್‌ಡ್ ಮಾತ್ರ ಅತ್ತಾಂದೆ ರಾತ್ರೆಡ್‌ಲಾ ರಾಜಕುಮಾರಿನ ಉಪ್ಪರಿಗೆಗ್ ಏರೆಗ್ಲಾ ತೆರಿಯಂದಿಲೆಕ್ಕ ಪೋದ್ ಬರಿಯರ ಸುರುಮಲ್ತೆ. ಬಾಕಿಲ್‌ಡ್ ಪೋದು ಗವಾಕ್ಷಿಡ್ ಪಿದಾಯಿ ಬರೊಂದಿತ್ತೆಗೆ. ಇಂಚ ಆಯನ ಬದ್‌ಕ್‌ಡ್ಲಾ 'ಭರತೇಶ ವೈಭವ'ದ ಬರವುಡ್ಲಾ ಶೃಂಗಾರ ಉರ್ಕುಂಡು. ಉರ್ಕಿನವು ತಮೆಲೊಡತ್ತೆ. ರತ್ನಾಕರನ ಜೀವನೊಡ್ಲಾ ಅಂಚಿನವೇ ಪೊರ್ತು ಬತ್ತ್‌ಂಡ್. ಆಯೆ ಕಾರ್ಲಗ್ ಬತ್ತ್‌ದ್ ಆಸ್ಥಾನ ಕವಿಯಾದ್ ಬೇಗೊಡೇ ಎಡ್ಡೆ ಪುಗರ್ತೆ ಪಡೆಯಿನ್ನೈನ್ ತೂಯಿನ ಕೆಲವುದಕ್ಲೆಗ್ ಆಯನ ಮಿತ್ತ್ ಕಿಚ್ಚಿ ಆದಿಪ್ಪೊಡು. ಎಂಚಾಂಡ್ಲ ಆಯನ್ ತಿರ್ತ್ ಬೂರಾವೊಡು, ಆಯನ ತಪ್ಪುನು ನಾಡ್ದ್ ಪತ್ತೊಡುಂದು ಅಕ್ಲು ನಾಡೊಂದಿತ್ತೆರ್. ಅಪಗ ಅಕ್ಲೆಗ್ ರತ್ನಾಕರೆ ರಾಜಕುಮಾರಿನೊಟ್ಟುಗು ರಾತ್ರೆ-ಪಗೆಲ್ ಮೋಕೆಡ್ ಮೆಯ್ ಮದಪ್ಪುನ ಸಂಗತಿ ತೆರಿಂಡ್. ಆಯಗ್ ಬುದ್ಧಿ ಕಲ್ಪಾವರ ಉಂದುವೇ ಸರಿಯಾಯಿನ ಸಂದರ್ಭ ಪಂಡ್‌ದ್ ಆಲೋಚನೆ ಮಲ್ತ್‌ದ್, ರಾಜಗ್ ಒಂಜೆಕ್ ರಡ್ಡ್ ಸೇರ್ಸಾದ್ ದೂರು ಕೊರಿಯೆರ್. ಕಾದಂಬರಿಕಾರೆರ್ನ್‌ಕ್‌ಲ್ ಪಂಡಿಲೆಕ್ಕ ಅಕುಲು ಸುರುಟ್ಟು ಕಾರ್ಲದ ಸ್ವಾಮಿಲೆಗ್ ತೆರಿಪಾದ್, ಆರೆನ ಮೂಲಕ ರಾಜಗ್ ತೆರಿಪಾಯೆರ್‌ಂದ್ ತೆರಿದ್ ಬರ್ಪುಂಡು. ಉಂದೆನ್ ಕೇನ್ಯ ಭೈರವ ರಾಜಗ್ ಭಾರೀ ಗರ್ವ ಬತ್ತ್‌ಂಡ್. ಈ ಮಾತ ವಿಷಯೊಲೆನ್ ಕಾರ್ಲದ ಲಲಿತಕೀರ್ತಿ ಸ್ವಾಮಿಲೆಗ್, ಅಂಚೆನೆ ರಾಜಗ್ ತೆರಿಪಾದ್ ರತ್ನಾಕರನ್ ತಿಕ್ಕಾದ್ ಪಾಡುನ್ನೈಟ್ 'ದ್ವಾದಶಾನುಪ್ರೇಕ್ಷೆ' ಬರೆಯಿನ ಕವಿ ವಿಜಯಣ್ಣನ ಮಲ್ಲ ಕೈ ಇತ್ತ್‌ಂಡ್‌ಂದ್ ಕೆಲವುದಕ್ಲ್ ಪನ್ಪೆರ್. ಆಂಡ ಆ ಪೊರ್ತುಡು ವಿಜಯಣ್ಣೆ ಇತ್ತಿಜೆ. ರತ್ನಾಕರಗ್ಲಾ ವಿಜಯಣ್ಣಗ್ಲಾ ನೂದು ವರ್ಸೊದ ವ್ಯತ್ಯಾಸ ಉಂಡುಂದು ತೆರಿನಕ್ಲ್ ಪಂತೆರ್. ಅವು ಎಂಚಿನಲ ಇಪ್ಪಡ್, ಅಂತೂ ರತ್ನಾಕರೆ ಪೊಣ್ಣ ಮೋಕೆಗ್ ಪೋದು ರಾಜನ ಕೈಟ್ ತಿಕ್ಕ್‌ದ್ ಬೂರ್ನಿ ಅಂತು ಕಂಡಿತ.

ಮುಲ್ಪ ಆಲೋಚನೆ ಮಲ್ಪೊಡಾಯಿನ ನನೊಂಜಿ ಸಂಗತಿ ದಾದ ಪಂಡ. ಮಸ್ತ್ ತೆರಿದ್‌ನ ರತ್ನಾಕರೆ ಇಂಚಿನ ಕೆಲಸ ಮಲ್ತ್‌ದಿಪ್ಪೆರೆಲಾ ಯಾವು, ಮಲ್ಪಂದೆ ಇಪ್ಪರಲಾ ಯಾವು.

ದಾಯೆ ಪಂಡ ಏಪಲಾ ಪೊಣ್ಣು ಮೋಕೆಡ್ ಬೂರಿನಾಯೆ ಕುರುಡೆರ್‌ಲೆಕ್ಕ ಆಪೆರಂದ್ ಒಂಜಿ ಪಾತೆರ ಉಂಡು. ರತ್ನಾಕರೆಲಾ ಅಂಚ ಆದಿಪ್ಪೆ. ಮೈ ಮದತ್ತ್‌ದ್ ರಾಜಕುಮಾರಿ ಶ್ಯಾಮಲೆನ ಸಹವಾಸ ಮಲ್ತ್‌ದಿಪ್ಪೆ. ಅತ್ತಾಂಡ ರತ್ನಾಕರೆ ಇಂಚ ದಾಲ ಮಲ್ಪಂದೆ ಇಪ್ಪರಲಾ ಯಾವು. ದಾಯೆ ಪಂಡ ಸಮಾಜೊಡು ಮಲ್ಲಾಕ್ಲೆ ಇಲ್ಲದ ಪೊಣ್ಣುನ್ ರತ್ನಾಕರನಂಚಿನ ಒರಿ ಆಣ್ ಮೋಕೆ ಮಲ್ತ್‌ದ್ ಕೈತಲ್ ಪೋವೊಡುಂದೇ ದಾಲ ಇಜ್ಜಿ. ಸರೀಟೇ ಕಣ್ಣ್ ದೆರ್ತ್‌ದ್ ಒಂತೆ ಜೋರುಡೆ ತೂಂಡಲಾ ಯಾವು. ಅವು ಮಾಮಲ್ಲ ತಪ್ಪು ಆಪುಂಡು. ರತ್ನಾಕರನ ವಿಷಯೊಡು ಅಂಚ ಆದುಪ್ಪುರ್ಲ್ಲಾ ಯಾವು. ಅಂತೂ ರತ್ನಾಕರನ ಮಿತ್ತ್ ಆಸ್ಥಾನ ಕವೀಂದ್ ಪಂಡ್‌ದ್, 'ಶೃಂಗಾರ ಕವಿ ಹಂಸರಾಜಾಂದ್' ಬಿರುದು ಕೊರಿನ ರಾಜಗೇ ಗರ್ವ ಬತ್ತ್‌ಂಡ್.

ರಾತ್ರೋರಾತ್ರೆ ರತ್ನಾಕರೆ ರಾಜಕುಮಾರಿನೊಟ್ಟುಗು ಉಪ್ಪರಿಗೆಡುಪ್ಪುನ ಪೊರ್ತುಡು ಸಾಕ್ಷಿ ಸಮೇತ ರಾಜನ ಕೈಕ್ ತಿಕ್ಕ್‌ದ್ ಬೂರ್ಯೆ. ರಾಜಾವಳೀ ಕಥೆಟ್ ದೇವಚಂದ್ರೆ ಪಂಡಿ ಪ್ರಕಾರ ರಾಜನ ಕೈಟ್ ತಿಕ್ಕ್‌ದ್ ಬೂರ್ದು ಬೇಜಾರಾದ್ (ಪೋಡಿದ್, ಆಯಡ ಇತ್ತಿನ ದಶವಾಯುಸಿದ್ಧಿ ವಿದ್ಯೆದ ಬಲೊಟ್ಟು ತಪ್ಪಾದ್ ಪಾರ್ದ್ ಪೋದು) ಆ ರಾತ್ರೆಡೇ ಸೀದಾ ಪೋದು ಆಯನ ಮೋಕೆದ ಗುರುಕುಲಾಯಿನ ಮಾಹೇಂದ್ರ ಕೀರ್ತಿಯೆರ್ಡ ಜೈನ ಧರ್ಮೋದ 'ಅಣುವ್ರತ ದೀಕ್ಷೆ' ದೆತ್ತೊಂಡೆ.

ಅಣುವ್ರತ ದೀಕ್ಷೆ ಪಂಡ ಐಟ್ ಐನ್ ಸಂಗತಿ ಬರ್ಪುಂಡು. 1) ಸತ್ಯ ಪನ್ಪೆ, ಸುಳ್ಳು ಪನ್ಪುಜಿ 2) ಅಹಿಂಸೆನ್ ಪಾಲಿಸಾವೆ, ಹಿಂಸೆ ಮಲ್ಪುಜಿ 3) ಕಂಡುನ ಬೇಲೆ ಮಲ್ಪುಜಿ 4) ದಿಂಜ ಪರಿಗ್ರಹ ದೀವೊನುಚಿ, ಅಂಚೆನೆ 5) ಬ್ರಹ್ಮಚರ್ಯ ಪಂಡ ಪೊಣ್ಣು ಜೊಕ್ಲೆನ್ ಹಾಳ್ ದೃಷ್ಟಿಡ್ ಕಣ್ಣ್ ದೆರ್ತ್ ತೂಪುಜಿ. – ಉದೆನ್ ಮಾತ ಎನಡ್ದ್ ತೀನ್ಯಾರ್ತ್ ಒಂತೆಡಾಂಡ್ಲಾ ಆಚರಣೆ ಮಲ್ಪುವೇಂದ್ ಗುರುಕ್ಲೆಡ ವ್ರತ ದೆತೊನ್ನವೆ 'ಅಣುವ್ರತ ದೀಕ್ಷೆ'. ಉಂದೆನ್ ರತ್ನಾಕರೆ ದೆತೊಂಡೆ. ನೆಟ್ಟ್ ರತ್ನಾಕರನ ದೃಷ್ಟಿಡ್ ಕಡೆತ್ತವು ಮಸ್ತ್ ಮುಖ್ಯ. ಅವು ಆಯನ ಜೀವನೊನೇ ಬದಲ್ ಮಲ್ತ್‌ಂಡ್.

ಮುಲ್ಪ ನಡತ್ತ್‌ನ ಸಂಗತಿನ್ ಕಾದಂಬರಿ ಬರೆಯಿನ ಶ್ರೀನಿವಾಸ್ ಬೊಕ್ಕ ಬ್ರಹಪ್ಪೆರ್ ಒಂತೆ ಬೇತೆ ರೀತಿಡ್ ಪನ್ಪೆರ್. ಅಕ್ಲೆನ ಪ್ರಕಾರ ರಾಜಕುಮಾರಿನೊಟ್ಟುಗು ಇತ್ತ್‌ನ ರತ್ನಾಕರೆ ರಾಜನ ಕೈಟ್ ತಿಕ್ಕ್‌ದ್ ಬೂರ್ನಗ, ರಾಜೆ ರಾತ್ರೆಡೇ ಆಯನ್ ಜೈಲ್‌ಡ್ ಪಾಡ್‌ಪಾಯೆ. ಅಲ್ಪ ಜೈಲ್‌ಡ್ ಕುಲ್ಲಿನ ರತ್ನಾಕರಗ್ ಬಾರಿ ಪಶ್ಚಾತ್ತಾಪ ಆಂಡ್. ಸನ್ಮಾನ ಆಯಿನ ಈ ಊರುಡೇ, ರಾಜನ ಕೈಟೇ ಅವಮಾನ ಆಯಿನಾಡ್ದಾತ್ರ ನನ ಮುಲ್ಪ ಇಪ್ಪುನು ಸರಿಯತ್ತ್‌ಂದ್ ಆಲೋಚನೆ ಮಲ್ತ್‌ನ ಆಯೆ ದೂರ ಪೋವೊಡುಂದು ನಿರ್ಣಯ ಮಲ್ತೆ. ಎಂಚಲಾ ಆಯನ ಕೈಟ್ 'ದಶವಾಯು ಸಿದ್ಧಿ ವಿದ್ಯೆ' ಇತ್ತ್‌ಂಡ್. ಐತ್ತ ಬಲೊಟ್ಟು ಏರೆಗ್ಲಾ ಗೊತ್ತಾವಂದಿಲೆಕ್ಕ ರಾತ್ರೆಡೇ ಜೈಲ್‌ಡ್ದ್ ಪಿದಾಯಿ ಬತ್ತೆ. ಒಂಚಿ ಪೋವೊಡುಂದ್ ತೆರಿಯಾಂದೆ ದುಂಬು ಪೋಯೆ. ಅಂಚಿ ವರಂಗ ದಾಂಟ್‌ದ್ ಆಗುಂಬೆ ಘಾಟಿದಂಚಿ ಪೋಯೆ. ಅಲ್ಪ ಸೋಮೇಶ್ವರೊಡು

ಆಯಗ್ 'ದಶವಾಯು ಸಿದ್ಧಿ ವಿದ್ಯೆ' ಕೊರಿನ ಸನ್ಯಾಸಿ ತಿಕ್ಯೆ. ಅಪಗ 'ಆ ವಿದ್ಯೆ ಯನನ್ ಹಾಳ್ ಮಲ್ತ್‌ಂಡ್'ಂದ್ ಪಂಡ್‌ದ್ ನನ ಬೊಡ್ಚಿಂದ್ ಆಯಗೇ ಪಿರ ಕೊರ್ಯೆ. ಐಡ್ದ್ ಬೊಕ್ಕ ಗಟ್ಟ ಮಿತ್ತರ್ದ್ ಗಟ್ಟೊಗು ಪೋಯೆ. ಆಗುಂಬೆ, ತೀರ್ಥಹಳ್ಳಿ ದಾಂಟ್‌ದ್ ಪೋನಗ ಆಯಗ್ ಜೈನೆರ್ನ 'ಅತಿಶಯ ಕ್ಷೇತ್ರ'ವಾಯಿನ, ಅಪ್ಪೆ ಶ್ರೀ ಪದ್ಮಾವತೀ ದೇವಿ ನೆಲೆಯಾದಿಪ್ಪುನ ಹೊಂಬುಚ ಕ್ಷೇತ್ರ ತಿಕ್ಕ್‌ಂಡ್. ಅಲ್ಪ ಬಾರೀ ಪ್ರಾಕ್‌ದ ಗುರು ಪೀಠೊಡು ಶ್ರೀ ದೇವೇಂದ್ರ ಕೀರ್ತಿ ಭಟ್ಟಾರಕೆರ್ ಸ್ವಾಮಿಲಾದ್ ಇತ್ತೆರ್ (ದೇವಚಂದ್ರೆ ಪಂಡಿನ ಮಾಹೇಂದ್ರ ಕೀರ್ತಿ ದೇವೇಂದ್ರ ಕೀರ್ತಿಲಾ ಆವರೆ ಸಾಧ್ಯ ಉಂಡು. ದಾಯೆ ಪಂಡ ಮಹೇಂದ್ರ ಪಂಡ ದೇವೇಂದ್ರಾಂದೆ ಅರ್ಥ. ರತ್ನಾಕರೆಲಾ ಆಯನ ಕಾವ್ಯೊಡುಲಾ ಮಹೇಂದ್ರ ಕೀರ್ತಿ ಎನ್ನ ಗುರುಂದ್ ಪಂಡೊಂದೆ.) ಅಂಚ ಹೊಂಬುಚೊಗು ಪೋಯಿನ ರತ್ನಾಕರೆ ಗುರುಕ್ಕುಲಾಯಿನ ದೇವೇಂದ್ರ ಕೀರ್ತಿಯೆರ್ನ ಕಾರ್ ಪತ್ಯೆ. ಆಯನ ಕತೆ ಪೂರ ಸ್ವಾಮಿಲೆಗ್ ಪಂಡೆ. ಆರೆಡ ಅಣುವ್ರತ ದೀಕ್ಷೆ ದೆತೊಂಡೆ.

ಹೊಂಬುಚ ಸೇರಿನ, ಗುರು ಮಾಹೇಂದ್ರ ಕೀರ್ತಿಯೆರ್ನ ಆಶ್ರಯ ಪಡೆಯಿನ ರತ್ನಾಕರೆ ಪಶ್ಚಾತ್ತಾಪ ಅಂಚೆನೆ ಅಣುವ್ರತ ದೀಕ್ಷೆಡ್ದಾತ್ರ ಮಸ್ತ್ ಬದಲಾಯೆ. ಆಂಡ ಮನಿಪಂದೆ ಕುಲ್ಲುನ ಸುಬಾವು ಆಯನವ್ವತ್ತ್. ಬಹುಶಃ ಮುಲ್ಪನೇ ಆಯೆ ಬರೆವೊಂದಿತ್ತಿನ 'ಭರತೇಶ ವೈಭವೊ'ನು ಮುಂದುವರ್ತ್‌ದಿಪ್ಪೊಡು. ಇತ್ತೆ ಆಯನ ಜೀವನದಲೆಕ್ಕನೆ, ಆಯನ ಕಾವ್ಯೊಡ್ಲಾ ಶೃಂಗಾರ, ಭೋಗ ವಿಷಯ ಕಡಿಮೆ ಆಂಡ್, ಆಧ್ಯಾತ್ಮ, ಯೋಗ ವಿಚಾರ ಹೆಚ್ಚಾಂಡ್. ಕಾದಂಬರಿ ಕಾರೆರ್‌ನಕ್ಲ್ ರತ್ನಾಕರೆ ಭರತೇಶ ವೈಭವೊನು ಮುಲ್ಪನೇ ಬರೆದ್ ಮುಗಿತ್ತೆಂದ್ ಪನ್ಪೆರ್. ಕಡೆಕ್ ಅವೆನ್ ಆಯನ ಮೋಕೆದ ಗುರುಕ್ಲೆಗ್ ತೋಜಾಯೆ. ಅವೆನ್ ತೂಯಿನ ಸ್ವಾಮಿಲು ಐಟ್ ಶೃಂಗಾರ ಒಂತೆ ಜಾಸ್ತಿ ಆಂಡ್‌ಂದ್ ಪಂಡೆರ್. ಅವೆನ್ ತಿದ್ದೊನೊಡುಂದ್ ತೆರಿಪಾಯೆರ್. ಗುರುಕ್ಲೆ ಪಾತೆರೊನ್ ಆವುಂದ್ ಒತೊಂಡೆ ರತ್ನಾಕರೆ.

ಕಾದಂಬರಿದ ಪ್ರಕಾರ... ಒಂತೆ ಸಮಯೊಡ್ದ್ ಬೊಕ್ಕ ನನೊಂಜಿ ಮಲ್ಲ ಜೈನ ಕ್ಷೇತ್ರವಾಯಿನ ಶ್ರವಣ ಬೆಳಗೊಳೊಡು ಪದ್ರಾಡ್ ವರ್ಸೊಗೊರ ಬರ್ಪುನ ಬಾಹುಬಲಿ ಸ್ವಾಮಿನ (ಗುಮ್ಮಡ್ ದೇವೆರ್ನ) ಮಹಾಮಸ್ತಕಾಭಿಷೇಕ ಬತ್ತ್‌ಂಡ್. ರತ್ನಾಕರೆ ಭರತೇಶ ವೈಭವೊನು ಪತೊಂದು, ಸ್ವಾಮಿಲ್ನ ಆಶೀರ್ವಾದ ಪಡೆವೊಂದು ಬೆಳಗೊಳೊಗು ಪೋಯೆ. ಅಲ್ಪಲಾ ಒಂಜಿ ಬಾರೀ ದುಂಬುದ ಗುರುಪೀಠ ಉಂಡು. ಅವು ಶ್ರೀ ಚಾರುಕೀರ್ತಿ ಭಟ್ಟಾರಕೆರ್ನ ಗುರುಪೀಠ. ಅಲ್ಪಲಾ ರತ್ನಾಕರೆ ಸ್ವಾಮಿಲೆನ ಕಾರ್‌ಪತ್ತ್‌ದ್, ಬದ್‌ಕ್‌ದ ಕತೆ ಪಂಡ್‌ದ್ 'ಭರತೇಶ ವೈಭವ' ತೋಜಾಯೆ. ಆರ್ಲಾ ಶೃಂಗಾರ ಹೆಚ್ಚಾಂಡ್‌ಂದ್ ಪಂಡ್‌ದ್, ಒಂತೆ ಆತ್ಮ-ಪರಮಾತ್ಮನಂಚಿ ಮನಸ್ ಕೊರ್ಲಾಂದ್ ಪಂಡೆರ್. ಆವುಂದ್ ಒತ್ತೊಂಡೆ; ಅಂಚೆನೆ ಮಲ್ತೆ. ಈತಾನಗ ಮಹಾಮಸ್ತಕಾಭಿಷೇಕೊಗು ಬತ್ತ್‌ನ ಬೆದ್ರದ, ರತ್ನಾಕರನ ಗುರ್ತೊದ ದೋಸ್ತಿನಕುಲು, ಆಯನ್ ಬೆದ್ರಗ್ ಬಲಾಂದ್ ಲೆತ್ತೆರ್. ಎಡ್ಡೆ ಧರ್ಮಗ್ರಂಥೊಲೆಗ್ ಮಾನಾದಿಗೆ ಮಲ್ಪುನ 'ಜೈನಕಾಶಿ' ಬೆದ್ರಡ್ 'ಭರತೇಶ ವೈಭವೊ'ಗ್ರಾ

ಎಡ್ಡೆ ಮಾನಾದಿಗೆ ತಿಕ್ಕೊಡು, ತಿಕ್ಕುಂಡುಂದ್ ಪಂಡೆರ್. ಅಕ್ಲೆನ ಒತ್ತಾಯೊಗ್ಲಾ, ಆಯನ ಪುಟ್ಟುದುನ ಊರು ಅಂಚನೆ ಬರೆಯಿನ ಗ್ರಂಥೊದ ಮಿತ್ತ್‌ದ ಮೋಕೆಡ್ಲಾ ಆಯೆ ಬೆದ್ರಗ್ ಅಕ್ಲೆಡೊಟ್ಟುಗೇ ಬತ್ತೆ. ಆ ಪೊರ್ತುಗು ಬೆದ್ರ ಮಠೊಟ್ಟುಲಾ ಕೆಲವು ಬದಲಾವಣೆ ಆದಿತ್ತ್‌ಂಡ್‌ಂದ್ ಕಾದಂಬರಿಕಾರೆರ್ ಪನ್ಪೆರ್.

ಕಾದಂಬರಿಡ್ ತಿಕ್ಕುನ ಈ ಹುಂಚ, ಶ್ರವಣ ಬೆಳಗೊಳೊಗು ರತ್ನಾಕರೆ ಪೋದು ಬತ್ತ್‌ನ ವಿಷಯ ಬೇತೆ ಮೂಲೊಡು ನಮಕ್ಕ್ ತಿಕ್ಕುಜಿ. ಅಂತೂ ಕಾರ್ಲಡ್ದ್ ಭರತೇಶ ವೈಭವ ಪತೊಂದು, ಓಲೋಲಾ ಸುತ್ತುದ್ ರತ್ನಾಕರೆ ಬೆದ್ರಗ್ ಬತ್ತೆಂದ್ ಪನೊಲಿ. ಉಂದುವೇ ಪೊರ್ತುಡು ಮಸ್ತ್ ಬೇಜಾರ್ ಮಲ್ತೊನ್ಯ ಕಾರ್ಲದ ರಾಜಕುಮಾರಿ ಶ್ಯಾಮಲಾ, ರತ್ನಾಕರೆ 'ಅಣುವ್ರತ ದೀಕ್ಷೆ' ಗೆತೊನ್ಯ ಸಂಗತಿ ಕೇಂಡ್‌ದ್, ಆಲ್‌ಲಾ ದೀಕ್ಷೆ ಗೆತೊಂದು ಹೊಂಬುಚ ಕ್ಷೇತ್ರ ಸೇರ್ಯೊಲು. ರತ್ನಾಕರೆ ಬೆದ್ರಗ್ ಬರ್ಪಿ ಪೊರ್ತುಗು ಆಯನ ಅಪ್ಪೆ-ಅಮ್ಮೆರ್‌ಲಾ ತೀರ್ದ್ ಪೋದಿಪ್ಪುವೆರ್. ತಂಗಡಿ ಮರುದೇವಿ ಮಾತ್ರ ಇಲ್ಲಡಿತ್ತೊಲು.

